# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಆಗಸ್ಟ್ 10, 2021

ಸಂಪುಟ : 48 ಸಂಚಿಕೆ : 88 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com





# ಬಿಸಿಯೂಟ ಕಾರ್ಯಕರ್ತೆಯರ ಪರಿಹಾರಕ್ಕೆ ಆಗ್ರಹ



ಜಗಳೂರು

ಜಗಳೂರು, ಆ.9- ಕೋವಿಡ್ 19 ಲಾಕ್‌ಡೌನ್ ಪರಿಹಾರವಾಗಿ 5 ಸಾವಿರ ರೂ. ಪರಿಹಾರ ನೀಡಲು ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆ ಗಾಗಿ ಆಗ್ರಹಿಸಿ ಎಐಟಿಯುಸಿ ಸಂಯೋಜಿತ ಬಿಸಿಯೂಟ ತಯಾರಕರ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಲ್ಲೂಕು ಕಛೇರಿ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ನಂತರ ತಹಶೀಲ್ದಾರ್ ಮುಖಾಂತರ ಮುಖ್ಯಮಂತ್ರಿ ಗಳಿಗೆ ಲಿಖಿತ ಮನವಿ ಸಲ್ಲಿಸಿದರು.

ಎಐಟಿಯುಸಿ ತಾಲ್ಲೂಕು ಅಧ್ಯಕ್ಷ ಮಹಮ್ಮದ್ ಭಾಷಾ ಮಾತನಾಡಿ, ರಾಜ್ಯದ ಸರ್ಕಾರಿ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿರಿಯ ಅಡುಗೆ ಸಹಾಯಕಿತರಿಗೆ ಗೌರವಧನ ರೂ. 2,700, ಸಹಾಯಕ ಅಡುಗೆಯವರಿಗೆ 2,600 ಮಾತ್ರ ಸಿಗುತ್ತಿದ್ದು, ಲಾಕ್‌ಡೌನ್ ಅವಧಿಯಿಂದ ಆರ್ಥಿಕ ಸಂಕಷ್ಟ ಎದುರಾಗಿದೆ. ಅಗತ್ಯ ದಿನ ಬಳಕೆ ವಸ್ತುಗಳ ಬೆಲೆ ಏರಿಕೆಯಿಂದ ಕುಟುಂಬ ನಿರ್ವಹಣೆ ಕಷ್ಟವಾಗಿದ್ದು, ಗಾಯದ ಮೇಲೆ ಬರೆ ಎಳೆದಂತಾಗಿದೆ. ಕೂಡಲೇ ಕನಿಷ್ಠ ವೇತನ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

2021 ನೇ ಸಾಲಿನ ಜೂನ್-ಜುಲೈ ತಿಂಗಳ ಗೌರವ ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕು. ಡಿ ಗ್ರೂಪ್ ನೌಕರರೆಂದು ಪರಿಗಣಿಸಿ, ಖಾಯಂಗೊಳಿಸಬೇಕು ಎಂದು ಒತ್ತಾಯಿಸಿದರು.

ಪ್ರಧಾನ ಕಾರ್ಯದರ್ಶಿ ಮಾದಿಹಳ್ಳಿ ಮಂಜುನಾಥ್ ಮಾತನಾಡಿ, ಬಿಸಿಯೂಟ ಕಾರ್ಯಕರ್ತೆಯರಿಗೆ ಎಲ್‌ಐಸಿ ಆಧಾರಿತ ಪಿಂಚಣಿ ಯೋಜನೆ ಜಾರಿಗೆ ತರಬೇಕು. ಕೆಲಸದಿಂದ ಬಿಡುಗಡೆಗೊಳಿಸುವಾಗ 2 ಲಕ್ಷ ರೂ. ಇಡಿಗಂಟು ನೀಡಬೇಕು. ಪ್ರತಿ ಶಾಲೆಯಲ್ಲಿ ಇಬ್ಬರು ಅಡುಗೆ ತಯಾರಕರನ್ನು ನೇಮಿಸಬೇಕು. ಬಿಸಿಯೂಟ ಯೋಜನೆಯನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಬಾರದು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಎಐಟಿಯುಸಿ ಬಿಸಿಯೂಟ ತಯಾರಕರ ಪದಾಧಿಕಾರಿಗಳಾದ ಚನ್ನಮ್ಮ, ಮೀನಾಕ್ಷಿ, ದುರುಗಮ್ಮ, ಪ್ರೇಮ, ದಾಕ್ಷಾಯಿಣಿ, ಪಾರ್ವತಮ್ಮ ಸಿ. ಗೌರಮ್ಮ, ರತ್ನಮ್ಮ, ಆಶಾಬಿ, ಮುಖಂಡರಾದ ವೀರಣ್ಣ, ತಿಪ್ಪೇಸ್ವಾಮಿ ಇನ್ನಿತರರು ಭಾಗವಹಿಸಿದ್ದರು.

## ಧರ್ಮಸ್ಥಳದ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ಸ್ವಚ್ಛತೆ



ದಾವಣಗೆರೆ, ಆ.9 - ಧರ್ಮಸ್ಥಳದ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ವತಿಯಿಂದ ಸ್ಥಳೀಯ ವಿನೋಬನಗರದ ಶ್ರೀ ಕಾಳಿಕಾದೇವಿ ದೇವಸ್ಥಾನದಲ್ಲಿ ಸ್ವಚ್ಛತಾ ಕಾರ್ಯಕ್ರಮ ಮತ್ತು ವಕೀಲರಾದ ಸಿ.ಪಿ. ಅನಿತಾ ಅವರು ಸಸಿ ವಿತರಣೆ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸೂಪರವೈಸರ್ ಮಾರುತಿ ನಾಯ್ಕ್, ವಕೀಲರ ಸಂಘದ ನಿಕಟಪೂರ್ವ ಉಪಾಧ್ಯಕ್ಷರು ಮತ್ತು ಜಿಲ್ಲಾ ಬಿ.ಜೆ.ಪಿ. ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕ ಹೆಚ್. ದಿವಾಕರ್, ಒಕ್ಕೂಟದ ಅಧ್ಯಕ್ಷರಾದ ಶ್ರೀಮತಿ ಕವಿತಾ ಮತ್ತು ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಓಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಕ್ರೀಡಾಪಟುಗಳಿಗೆ ಇಂದು ಅಭಿನಂದನೆ

ಜಿಲ್ಲಾ ಕ್ರೀಡಾಪಟುಗಳ ಸಂಘದಿಂದ ಓಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಟೀಮ್ ಇಂಡಿಯಾದ ಕ್ರೀಡಾಪಟುಗಳಿಗೆ ಅಭಿನಂದನಾ ಕಾರ್ಯಕ್ರಮವು ಹರಳಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ಇಂದು ಬೆಳಿಗ್ಗೆ 9 ಕ್ಕೆ ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ನೇತೃತ್ವದಲ್ಲಿ ನಡೆಯಲಿದೆ.

## ಬೆಳ್ಳೂಡಿ ಶಾಲೆಗೆ ಟಿವಿ ಕೊಡುಗೆ



ಹರಿಹರ, ಆ.9- ಸಂತೇಬೆನ್ನೂರಿನ ಕೆ. ಸಿರಾಜ್ ಅಹಮದ್ ಅವರು ಯಾಂತ್ರಿಕ ಶಿಕ್ಷಣಕ್ಕೆ ಅನುಕೂಲವಾಗಲಿ ಎಂಬ ಸದುದ್ದೇಶದಿಂದ ಅವರ ತಾಯಿಯವರ ಹೆಸರಿನಲ್ಲಿ ಹರಿಹರ ತಾಲ್ಲೂಕು ಬೆಳ್ಳೂಡಿ ಗ್ರಾಮದ ರಾಜಗೊಂಡ ಜನಾಂಗದ ಹಿಂದುಳಿದ ಮಕ್ಕಳ ಶಾಲೆಗೆ ದೂರದರ್ಶನವನ್ನು ಕೊಡುಗೆಯಾಗಿ ನೀಡಿದರು.

ಸರಳ ಕಾರ್ಯಕ್ರಮದಲ್ಲಿ ಹರಿಹರ ತಾಲ್ಲೂಕು ಕಸಾಪ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ, ರಾಜ್ಯ ಗಾನಯೋಗಿ ಪರಿಷತ್ ಕಾರ್ಯದರ್ಶಿ ಎಂ.ಬಿ. ನಾಗರಾಜ್ ಕಾಕನೂರು ಮಾತನಾಡಿದರು.

ಮುಖ್ಯ ಶಿಕ್ಷಕ ಅಬ್ದುಲ್ ಸಲಾಂ ಕಾರ್ಯಕ್ರಮ ನಡೆಸಿಕೊಟ್ಟರು. ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಣ್ಣ, ಎಸ್‌ಡಿಎಂಸಿ ಉಪಾಧ್ಯಕ್ಷೆ ನಂದಿನಿ, ಗ್ರಾ.ಪಂ. ಅಧ್ಯಕ್ಷೆ ಗಂಗಮ್ಮ ಬೀರಪ್ಪ, ಮಲ್ಲಿಕಾರ್ಜುನ, ಕರಿಬಸಪ್ಪ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಉಕ್ಕಡಗಾತ್ರಿ : ರಾಜಗೋಪುರ ನಿರ್ಮಾಣಕ್ಕೆ ಶಿಲಾನ್ಯಾಸ



ಮಲೇಬೆನ್ನೂರು, ಆ.9- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ದೇವಸ್ಥಾನದ ಎದುರು 3 ಕೋಟಿ ರೂ. ವೆಚ್ಚದಲ್ಲಿ ಮಹಾ ರಾಜಗೋಪುರ ನಿರ್ಮಾಣಕ್ಕೆ ಸೋಮವಾರ ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ದಿವ್ಯಸಾನ್ನಿಧ್ಯದಲ್ಲಿ ಶಿಲಾನ್ಯಾಸ ನೆರವೇರಿಸಲಾಯಿತು.

ನಂತರ ಜರುಗಿದ ಸರಳ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ಭಕ್ತರ ಸಹಕಾ ರದಿಂದಾಗಿ ರಾಜಗೋಪುರ ನಿರ್ಮಾಣಕ್ಕೆ ಚಾಲನೆ ಸಿಕ್ಕಿ ರುವುದು ಸಂತಸ ತಂದಿದೆ. ನಿಗದಿತ ಸಮಯದೊಳಗೆ ಕಾಮಗಾರಿ ಪೂರ್ಣಗೊಳ್ಳಲಿ ಎಂದು ಆಶಿಸಿದರು.

ಕೊರೊನಾದಿಂದಾಗಿ ಎಲ್ಲರಿಗೂ ತೊಂದರೆ ಆಗಿದೆ. ಶನಿವಾರ, ಭಾನುವಾರ ರಾಜ್ಯದ ನಾನಾ ಭಾಗಗಳಿಂದ ಭಕ್ತರು ಅಜ್ಜಯ್ಯನ ದರ್ಶನಕ್ಕೆ ಬಂದು ದರ್ಶನ ಸಿಗದೆ ನಿರಾಸೆಯಿಂದ ವಾಪಸ್ ಹೋಗಿರುವುದು ನಮಗೂ ಬೇಸರ ತಂದಿದೆ. ಆದರೆ ಪರಿಸ್ಥಿತಿ ಹೀಗಿರುವಾಗ ಸರ್ಕಾರದ ನಿರ್ದೇಶನವನ್ನು ಎಲ್ಲರೂ ಪಾಲಿಸಬೇಕೆಂದರು.

ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಎಸ್. ಸುರೇಶ್ ಪ್ರಾಸ್ತಾವಿಕವಾಗಿ ಮಾತನಾಡಿ, 35 ಅಡಿ ಅಗಲ, 75 ಅಡಿ ಎತ್ತರದ ಈ ರಾಜಗೋಪುರವನ್ನು 3 ವರ್ಷದೊಳಗೆ ನಿರ್ಮಿಸುವ ಸಂಕಲ್ಪ ಮಾಡಿದ್ದೇವೆ ಎಂದರು.

ಟ್ರಸ್ಟ್ ಕಮಿಟಿ ಸದಸ್ಯರಾದ ನಾಗರಾಜಪ್ಪ ದಿಲ್ಲಿವಾಲ, ಗದಿಗೆಪ್ಪ ಪಾಟೀಲ್, ಬಸವನಗೌಡ ಪಾಟೀಲ್, ವೀರನಗೌಡ ಹಲಗಪ್ಪ, ವಿವೇಕಾನಂದ, ಗಣೇಶ್ ರಾಜಗೋಪುರದ ವಾಸ್ತುಶಿಲ್ಪಿ ಮುರುಡೇಶ್ವರ ಜಯಂತ್ ಮೂಡಲಮನೆ ಸೇರಿದಂತೆ ಭಕ್ತರು ಈ ವೇಳೆ ಹಾಜರಿದ್ದರು.

## ಎಸ್ಸೆಸ್ಸೆಲ್ಸಿ ಪರೀಕ್ಷೆ : ಜೈನ್ ವಿದ್ಯಾಲಯಕ್ಕೆ ಉತ್ತಮ ಫಲಿತಾಂಶ

ದಾವಣಗೆರೆ, ಆ.9 - ನಗರದ ಪಿ.ಜೆ. ಬಡಾವಣೆಯ ಜೈನ್ ವಿದ್ಯಾಲಯ ಶಾಲೆಗೆ ಜುಲೈನಲ್ಲಿ ನಡೆದ ಎಸ್ಸೆ ಸ್ಸೆಲ್ಸಿ ಪರೀಕ್ಷೆಯಲ್ಲಿ 98 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 28 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 50 ವಿದ್ಯಾರ್ಥಿಗಳು ಪ್ರಥಮ ದರ್ಜೆ, 13 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ರೋನಿತ್ ಆರ್ 621 (ಶೇ.99.36) ಅಂಕ ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಹಾಗೂ ರಾಜ್ಯಕ್ಕೆ 3ನೇ ಸ್ಥಾನ ಪಡೆದಿರುತ್ತಾನೆ. ನಿತಿನ್ ಕೆ. 619 (ಶೇ.99.04) ಅಂಕಗಳನ್ನು ಗಳಿಸಿ ರಾಜ್ಯಕ್ಕೆ 4ನೇ ಸ್ಥಾನ ಪಡೆದಿರುತ್ತಾನೆ, ಶಶಾಂಕ್ ಆರ್.ಎಸ್ 611 (ಶೇ.97.76) ಅಂಕ ಪಡೆದಿರುತ್ತಾನೆ.

## ಕಿಟ್‌ಗಾಗಿ ಕಿತ್ತಾಟ - ನೂಕಾಟ



ದಾವಣಗೆರೆ, ಆ.9- ನಗರದ ಭಾರತ್ ಕಾಲೋನಿಯ 5ನೇ ಕ್ರಾಸ್‌ನಲ್ಲಿ ಕಾರ್ಮಿಕ ಇಲಾಖೆಯಿಂದ ಕಾರ್ಮಿಕರಿಗೆ ಕಿಟ್‌ಗಳನ್ನು ವಿತರಿಸುತ್ತಿದ್ದ ವೇಳೆ ಕಿಟ್‌ಗಾಗಿ ಮಹಿಳೆಯರು ನೂಕುನುಗ್ಗಲು ನಡೆಸಿದ್ದಾರೆ. ಅಲ್ಲದೇ, ನಾ ಮುಂದು ತಾ ಮುಂದು ಎಂದು ನಿಂತಲ್ಲೇ ಕಿತ್ತಾಡಿಕೊಂಡಿರುವ ಘಟನೆ ಭಾನುವಾರ ನಡೆದಿದೆ.

ಕಿಟ್ ಪಡೆಯುಲು ನಗರದ ನೂರಾರು ಜನರು ಒಂದೇ ಕಡೆ ಸೇರಿದ್ದು, ಈ ವೇಳೆ ಒಬ್ಬರಿಗೊಬ್ಬರು ತಳ್ಳಾಟ ನೂಕಾಟ ನಡೆಸಿ, ಮಾತಿನ ಚಕಮಕಿ ಕೂಡ ನಡೆಸಿದ್ದಾರೆ. ಇಷ್ಟೊಂದು ಪ್ರಮಾಣದಲ್ಲಿ ಜನರು ಸೇರಿದ್ದರೂ ಯಾವುದೇ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳದಿರುವುದು ಕಂಡು ಬಂದಿದೆ. ಅಲ್ಲದೇ ಬಂದವರಲ್ಲಿ ಯಾವುದೇ ಸಾಮಾಜಿಕ ಅಂತರ, ಮಾಸ್ಕ್ ಇಲ್ಲದೇ ಗುಂಪುಗೂಡಿ ನೂಕು ನುಗ್ಗಲು ನಡೆಸಿದ್ದಾರೆ.

## ಜಿಎಂಐಟಿ ಕಾಲೇಜ್‌ನಲ್ಲಿ ಪ್ರಾಡಕ್ಟ್ ಎಕ್ಸ್‌ಪೋ




ದಾವಣಗೆರೆ, ಆ.9- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳು ತಯಾರಿಸಿದ ಉತ್ಪನ್ನಗಳ ಪ್ರದರ್ಶನವನ್ನು ಪ್ರಾಡಕ್ಟ್ ಎಕ್ಸ್‌ಪೋ-2021 ಹೆಸರಿನಡಿ ಪ್ರದರ್ಶಿಸಿ, ಹೊರ ಜಗತ್ತಿಗೆ ಪರಿಚಯಿಸಲಾಯಿತು.

ವಿದ್ಯಾರ್ಥಿಗಳು ತಾವು ತಯಾರಿಸಿದ ಒಟ್ಟು 38 ಉತ್ಪನ್ನಗಳು/ ಹೊಸ ವಿಚಾರಗಳನ್ನು ಪ್ರದರ್ಶಿಸಿದರು. ಕಾಲೇಜು ವಿದ್ಯಾರ್ಥಿಗಳು ಇದರ ಮಾಹಿತಿ ಪಡೆದರು.

ಕೃಷಿ, ಸಂರಕ್ಷಣೆ, ಜೈವಿಕ ಇಂಧನ, ರೋಬೋಟಿಕ್ಸ್, ಮೂಲ ಆಹಾರ ವಸ್ತುಗಳು, ಕಟ್ಟಡ ಸಾಮಗ್ರಿಗಳು, ನೈಸರ್ಗಿಕ ವಸ್ತುಗಳಿಂದ ತಯಾರಿಸಿದ ಪದಾರ್ಥಗಳು, ಆರೋಗ್ಯ, ಸೌರ ಮತ್ತು ಪವನ ಶಕ್ತಿಗಳ ಬಳಕೆ ಹೀಗೆ ವಿವಿಧ ಕ್ಷೇತ್ರಗಳಿಗೆ ಉಪಯೋಗಕ್ಕೆ ಬರುವಂತಹ ಉತ್ಪನ್ನಗಳು ಪ್ರದರ್ಶಿತವಾಗಿದ್ದವು.

ಬಹುಮುಖ್ಯವಾಗಿ ರೈಲಿನ ಶೌಚಾಲಯದಲ್ಲಿ ಸೆಪ್ಟಿಕ್ ಟ್ಯಾಂಕ್ ಅಳವಡಿಸಿ, ಅದು ಸ್ವಯಂ ಚಾಲಿತವಾಗಿ ತೆರೆಯುವಂತೆ ಹಾಗೂ ಮುಚ್ಚುವಂತೆ ಮಾಡಿರುವ ಮಾಡೆಲ್ ಪ್ರದರ್ಶಿಸಲಾಯಿತು.

ಪ್ರದರ್ಶನವನ್ನು ಸಂಸ್ಥೆಯ ಪ್ರತಿನಿಧಿ ವೈ.ಯು. ಸುಭಾಷ್‌ಚಂದ್ರ ಉದ್ಘಾಟಿಸಿದರು. ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್ ಮಾಹಿತಿ ನೀಡಿದರು. ಶ್ರೇಯಸ್ ವೆರ್ಣೇಕರ್ ಮ್ಯಾನೇಜಿಂಗ್ ಡೈರೆಕ್ಟರ್ ರೋವ್ ಲ್ಯಾಬ್ ಪ್ರಾಜೆಕ್ಟ್‌ಗಳನ್ನು ವಿಶ್ಲೇಷಿಸಿ, ತೀರ್ಪುಗಳನ್ನು ನೀಡಿದರು.

ವಿದ್ಯಾರ್ಥಿಗಳಾದ ಎಂ.ಎಚ್. ಅನುಷ, ಎಂ.ಎಚ್. ಕಾರ್ತಿಕ್, ಡಿ. ಚೇತನ್, ಎಂ. ಸ್ನೇಹ, ಕೆ. ದರ್ಶನ್, ಭರತ್ ಶರ್ಮಾ, ರಾಜೇಂದ್ರ ಕುಮಾರ್, ಪಿ. ದರ್ಶನ್, ಎಂ.ಎಸ್. ಅನುಷ್, ಎಂ. ಅಭಿಲಾಷ್, ಎಚ್. ಅಗಸ್ತ್ಯ, ಎಸ್. ಚೇತನ್ ಇವರ ಗುಂಪುಗಳಿಗೆ ಬಹುಮಾನ ವಿತರಿಸಲಾಯಿತು.

ಯಾಂತ್ರಿಕ ವಿಭಾಗದ ಮುಖ್ಯಸ್ಥ ಡಾ. ಸಿ.ವಿ. ಶ್ರೀನಿವಾಸ್, ಡಾ. ಬಿ.ಎ. ಮುದಸಿರ್ ಪಾಷ ಹಾಗೂ ತರಬೇತಿ ಮತ್ತು ಉದ್ಯೋಗ ವಿಭಾಗದ ಮುಖ್ಯಸ್ಥ ಟಿ.ಆರ್. ತೇಜಸ್ವಿ ಕಟ್ಟಿಮನಿ ಆಯೋಜಿಸಿದ್ದರು.

## ವೆಜಿಟಬಲ್ ಪ್ಲಾಂಟ್ ಕೋ-ಆಪ್‌ನ ವಾರ್ಷಿಕ ಮಹಾಸಭೆ



ದಾವಣಗೆರೆ, ಆ.9- ವೆಜಿಟಬಲ್ ಪ್ಲಾಂಟ್ ಸೌಹಾರ್ದ ಕೋ-ಆಪರೇಟಿವ್ ಸಂಸ್ಥೆಯ 5ನೇ ವರ್ಷದ ಸರ್ವ ಸದಸ್ಯರ ಮಹಾಸಭೆಯು ಸಂಸ್ಥೆಯ ಆವರಣದಲ್ಲಿ ಇಂದು ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷ ಬಿ.ಸುರೇಶ್ ಹಾಲೇಕಲ್ ವಹಿಸಿದ್ದರು. ಕ.ರಾ.ಸೌ.ಸಂ.ಸ.ನಿ. ಚಿತ್ರದುರ್ಗ - ದಾವಣಗೆರೆ ಜಿಲ್ಲಾ ಸಂಯೋಜಕ ನಟರಾಜ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಜೆ.ಕೆ.ಶಿವಕುಮಾರ್, ನಿರ್ದೇಶಕರುಗಳಾದ ಕೆ.ಹೆಚ್.ಶಿವಯೋಗಪ್ಪ, ಆರ್.ಎನ್.ಮಾರುತಿ, ಎನ್.ರಾಜಣ್ಣ, ಹೆಚ್.ಬಿ. ಮಂಜುನಾಥ್, ಎಸ್.ವಿ.ರುದ್ರಮುನಿ, ಸಿ.ಹನುಮಂತಪ್ಪ, ಟಿ.ಮಹಾಂತೇಶ್, ಎಂ.ಹೆಚ್.ರಾಜಪ್ಪ, ಮಲ್ಲಿಕಾರ್ಜುನ್ ಪಿ.ವಾಲಿ, ಶ್ರೀಮತಿ ಆಶಾ ಕೃಷ್ಣಮೂರ್ತಿ, ಶ್ರೀಮತಿ ಹೆಚ್.ಟಿ.ಶ್ವೇತಾ, ಆಂತರಿಕ ಲೆಕ್ಕ ಪರಿಶೋಧಕ ಹೆಚ್.ತಿರುಕಪ್ಪ, ಪ್ರಧಾನ ವ್ಯವಸ್ಥಾಪಕ ಆರ್.ವೆಂಕಟಾಚಲಮೂರ್ತಿ, ಲೆಕ್ಕಪರಿಶೋಧಕ ಎನ್. ಚನ್ನಬಸವಣ್ಣ ಮತ್ತಿತರರು ಉಪಸ್ಥಿತರಿದ್ದರು.

## ಶಾಸಕಿ ಪೂರ್ಣಿಮಾಗೆ ಸಚಿವ ಸ್ಥಾನಕ್ಕೆ ಒತ್ತಾಯ


ಹರಪನಹಳ್ಳಿ

ಹರಪನಹಳ್ಳಿ, ಆ.9- ಹಿರಿಯೂರು ಶಾಸಕರಾದ ಶ್ರೀಮತಿ ಪೂರ್ಣಿಮಾ ಶ್ರೀನಿವಾಸ್‌ಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ, ತಾಲ್ಲೂಕು ಯಾದವ ಸಂಘದ ವತಿಯಿಂದ ಇಂದು ಇಲ್ಲಿ ಮೆರವಣಿಗೆ ಮೂಲಕ ಮಿನಿವಿಧಾನ ಸೌಧಕ್ಕೆ ತೆರಳಿ ತಹಶೀಲ್ದಾರವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಈ ವೇಳೆ ಯಾದವ ಸಮಾಜದ ಅಧ್ಯಕ್ಷ ಎಂ. ಶಿವಮೂರ್ತೆಪ್ಪ ಮಾತನಾಡಿ, ಪೂರ್ಣಿಮಾ ಶ್ರೀನಿವಾಸ್ ಉತ್ಸಾಹಿ ಯುವ ಮತ್ತು ಗೊಲ್ಲ ಸಮಾಜದ ಏಕೈಕ ಶಾಸಕರಾಗಿದ್ದಾರೆ. ಬಿಜೆಪಿಯಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ 1ರಲ್ಲಿ ಇವರೊಬ್ಬರೆ ಶಾಸಕರಾಗಿದ್ದಾರೆ. ಪ್ರವರ್ಗ 1ರಲ್ಲಿ 95 ಜಾತಿಗಳಿದ್ದು, ಒಂದು ಕೋಟಿಗೂ ಅಧಿಕ ಜನಸಂಖ್ಯೆ ಇರುತ್ತದೆ. ಇವರೆಲ್ಲರ ಪ್ರತಿನಿಧಿಯಾಗಿ ಪೂರ್ಣಿಮಾ ಅವರು ಸಂಪುಟದಲ್ಲಿರಬೇಕಿತ್ತು ಎಂದಿದ್ದಾರೆ.

ಸಹ ಕಾರ್ಯದರ್ಶಿ ಮತ್ತೂರು ಕೋಟೆಪ್ಪ ಮಾತನಾಡಿ, ಕಳೆದ ಲೋಕಸಭಾ ಚುನಾವಣೆ ಹಾಗೂ ಉಪಚುನಾವಣೆಗಳಲ್ಲಿ ರಾಜ್ಯಾದ್ಯಂತ ಗೊಲ್ಲ ಸಮಾಜದ ಮತಗಳನ್ನು ಬಿಜೆಪಿಗೆ ಹಾಕಿಸುವಲ್ಲಿ ಶಾಸಕರು ಶ್ರಮಿಸಿದ್ದಾರೆ. ಸಾಮಾಜಿಕ ನ್ಯಾಯದಡಿ ಪೂರ್ಣಿಮಾ ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ಮಹಿಳೆಯರಿಗೆ ಪ್ರಾಶಸ್ತ್ಯ ನೀಡಿದ ಹೆಗ್ಗಳಿಕೆ ಬಿಜೆಪಿಗೆ ದೊರೆಯುತ್ತದೆ ಎಂದರು.

## ಜಗಳೂರು : ವಿವಿಧ ಸೌಲಭ್ಯಗಳಿಗಾಗಿ ತೋಟಗಾರಿಕೆ ಇಲಾಖೆಯಲ್ಲಿ ಅರ್ಜಿ

ಜಗಳೂರು, ಆ.9- ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಯಿಂದ, ಇಲಾಖೆಯಿಂದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ವಿವಿಧ ಬೆಳೆಗಳ ಪ್ರದೇಶ ವಿಸ್ತರಣೆ, ಕೃಷಿ ಹೊಂಡ, ಸಮುದಾಯ ಕೃಷಿ ಹೊಂಡ, ಪ್ಯಾಕ್ ಹೌಸ್ ಘಟಕ, ಈರುಳ್ಳಿ ಶೇಖರಣಾ ಘಟಕ ಹಾಗೂ ಇತರೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಆಗಸ್ಟ್ 17 ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಹೋಬಳಿ ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸುವಂತೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ವೆಂಕಟೇಶ್ ಮೂರ್ತಿ ತಿಳಿಸಿದ್ದಾರೆ.

## ಶಿರಮಗೊಂಡನಹಳ್ಳಿಯಲ್ಲಿ ಇಂದು



ದಾವಣಗೆರೆ ತಾಲ್ಲೂಕು ಶಿರಮಗೊಂಡನ ಹಳ್ಳಿ ಗ್ರಾಮದಲ್ಲಿ ಶ್ರೀ ಕಟ್ಟಿ ದುರ್ಗಾಂಬಿಕಾ ದೇವಿ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮ ಇಂದು ನೆರವೇರಲಿದೆ. ಬೆಳಿಗ್ಗೆ 9.30ಕ್ಕೆ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ದೇವಿಯ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ನೆರವೇರಿಸುವರು. ವಿಶೇಷ ಆಹ್ವಾನಿತರಾಗಿ ಶಾಸಕರಾದ ಎಸ್.ಎ. ರವೀಂದ್ರನಾಥ್, ಡಾ. ಶಾಮನೂರು ಶಿವಶಂಕರಪ್ಪ ಆಗಮಿಸಲಿದ್ದಾರೆ. ನಂತರ ಅನ್ನ ಸಂತರ್ಪಣೆ ನೆರವೇರಲಿದೆ.

## ಕೂಡ್ಲಿಗಿಯಲ್ಲಿ ಪತ್ರಿಕಾ ದಿನಾಚರಣೆ


ಕೂಡ್ಲಿಗಿ

ಕೂಡ್ಲಿಗಿ, ಆ.9- ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಕಾನಾಮಡುಗು ಗ್ರಾಮದ ಶ್ರೀ ಶರಣ ಬಸವೇಶ್ವರ ದಾಸೋಹ ಮಠದಲ್ಲಿ ಪತ್ರಿಕಾ ದಿನಾಚರಣೆ ಕಾರ್ಯಕ್ರಮವು ಕಳೆದ ವಾರ ನಡೆಯಿತು.

ಶ್ರೀ ಐಮಡಿ ಶರಣಾಚಾರ್ಯರ ಸಾನ್ನಿಧ್ಯದಲ್ಲಿ ಕೂಡ್ಲಿಗಿ ಮಾಜಿ ಶಾಸಕರು ಹಾಗೂ ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ ಮಾಲೀಕರಾಗಿದ್ದ ದಿ. ಕೆ. ವೆಂಕಟಸ್ವಾಮಿ ಅವರ ಮೊಮ್ಮಗ ಕೆ.ವಿ. ರವೀಂದ್ರನಾಥ ಬಾಬು ಚಾಲನೆ ನೀಡಿದರು. ಕೆಯುಡಬ್ಲ್ಯೂಜೆ ತಾಲ್ಲೂಕು ಅಧ್ಯಕ್ಷ ಕೆ. ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು.

ಚಿತ್ರದುರ್ಗದ ಚಿಕ್ಕಪ್ಪನಹಳ್ಳಿ ಷಣ್ಮುಖ ಉಪನ್ಯಾಸ ನೀಡಿದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾರ್ಯದರ್ಶಿ ಭೀಮಣ್ಣ ಗಜಾಪುರ, ಸಬ್ ಇನ್ಸ್‌ಪೆಕ್ಟರ್ ತಿಮ್ಮಣ್ಣ ಚಾಮನೂರು, ತಾ.ಪಂ. ಅಧ್ಯಕ್ಷ ನಾಗರತ್ನಮ್ಮ, ಬಿಜೆಪಿ ಉಪಾಧ್ಯಕ್ಷ ತಿಪ್ಪೇಸ್ವಾಮಿ, ಕಾಂಗ್ರೆಸ್ ಮುಖಂಡ ಗುಜ್ಜಲ್ ರಘು ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯದರ್ಶಿ ಬಂಗ್ಲೆ ಮಲ್ಲಿಕಾರ್ಜುನ್ ಮಾತನಾಡಿ, ಕೋವಿಡ್‌ನಿಂದ ಮೃತಪಟ್ಟ ಪತ್ರಕರ್ತರ ಕುಟುಂಬಗಳಿಗೆ ಸರ್ಕಾರದಿಂದ ಕುಟುಂಬಕ್ಕೆ ಐದು ಲಕ್ಷ ರೂ. ಪರಿಹಾರ ಒದಗಿಸಿದೆ. ಜೊತೆಗೆ ಗ್ರಾಮಾಂತರ ಪತ್ರಕರ್ತರ ಸ್ಥಿತಿಗತಿ, ಪತ್ರಕರ್ತರು ಅನುಭವಿಸುತ್ತಿರುವ ಸಮಸ್ಯೆಗಳ ಕುರಿತು ತಿಳಿಸಿದರು.

## ಉಮೇಶ್ ಧನಪಾಲ್ ನಿಧನ



ದಾವಣಗೆರೆ ಕೊಂಡಜ್ಜಿ ರಸ್ತೆ, ಅಶೋಕ ನಗರ 6ನೇ ಕ್ರಾಸ್ ವಾಸಿ ದೇವನಗರಿ ಗ್ಯಾಸ್ ಏಜೆನ್ಸಿ ಸಿಬ್ಬಂದಿ ಉಮೇಶ್ ಧನಪಾಲ್ (50) ಅವರು ದಿನಾಂಕ 09.08.2021ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ನಿಧನರಾದರು. ಪತ್ನಿ, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.08.2021ರ ಮಂಗಳವಾರ ಬೆಳಗ್ಗೆ 9 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ದಾಂಡೇಲಿ ಸರ್ಕಾರಿ ಸಾಮಿಲ್ ಅಭಿವೃದ್ಧಿ : ಶಾಸಕ ನಿರಂಜನ್ ಕುಮಾರ್



ರಾಣೇಬೆನ್ನೂರು

ರಾಣೇಬೆನ್ನೂರು, ಆ.9- ಕಳೆದ 30 ವರ್ಷಗಳಿಂದ ಯಾವುದೇ ಲಾಭಾಂಶವಿಲ್ಲದೆ ಶಿಥಿಲಗೊಂಡಿರುವ ದಾಂಡೇಲಿಯ ಸರ್ಕಾರಿ ಜೈಹಿಂದ್ ಸಾಮಿಲ್ ಅಭಿವೃದ್ಧಿಗೊಳಿಸಲಾಗುವುದು ಎಂದು ಗುಂಡ್ಲುಪೇಟೆ ಶಾಸಕರೂ, ಕರ್ನಾಟಕ ಅರಣ್ಯ, ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆದ ಎಸ್. ಸಿ. ನಿರಂಜನಕುಮಾರ ತಿಳಿಸಿದ್ದಾರೆ.


ನಿಗಮದ ನಿರ್ದೇಶಕರಾದ ರಾಣೇಬೆನ್ನೂರಿನ ಭಾರತಿ ಜಂಬಗಿ ಅವರ ನಿವಾಸಕ್ಕೆ ಇಂದು ಭೇಟಿ ನೀಡಿದ್ದ ಸಂದರ್ಭದಲ್ಲಿ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ರೈಲು ಹಳಿ ಜೋಡಿಸುವ ಕಟ್ಟಿಗೆ, ಮನೆಯ ಪಿಠೋಪಕರಣ ಮುಂತಾದವುಗಳು ಸೇರಿದಂತೆ, ಸರ್ಕಾರ ಹಾಗೂ ಸಾರ್ವಜನಿಕರಿಗೆ ಉಪಯುಕ್ತವಾಗುವ ನೂರು ವರ್ಷ ಹಳೆಯದಾದ ಈ ಸಾಮಿಲ್ ನಾಲ್ಕು ನೂರು ಕಾರ್ಮಿಕರಿಗೆ ಉದ್ಯೋಗ ನೀಡಿದೆ. ಇದನ್ನು ಅಭಿವೃದ್ಧಿ ಪಡಿಸಲು ನಿಗಮ ಆದ್ಯತೆ ನೀಡಲಿದೆ ಎಂದು ನಿರಂಜನ್‌ಕುಮಾರ್ ಹೇಳಿದರು.

ಅರಣ್ಯದಲ್ಲಿ ಒಣಗಿ ಬೀಳುವ ಮರಗಳನ್ನು ಸಂಗ್ರಹಿಸಿ ಡಿಪೋಗಳ ಮೂಲಕ ಹರಾಜು ಮಾಡಿ ಆದಾಯ ಹೆಚ್ಚಿಸುವಲ್ಲಿ ನಿಗಮ ಶ್ರಮಿಸುತ್ತದೆ. ರಾಜ್ಯದಲ್ಲಿ ಅರಣ್ಯ ವಲಯವನ್ನು 8 ವಿಭಾಗಗಳನ್ನಾಗಿ ಮಾಡಲಾಗಿದ್ದು, ಎಲ್ಲ ವಿಭಾಗಗಳ ಅಭಿವೃದ್ಧಿ ಕುರಿತು ಪರಿಶೀಲನೆ ಮಾಡಿ ಅವಶ್ಯ ಕಾಮಗಾರಿಯ ಯೋಜನೆ ರೂಪಿಸಲು ನಿರ್ದೇಶಕರೊಂದಿಗೆ ಪ್ರವಾಸದಲ್ಲಿರುವುದಾಗಿ ಅಧ್ಯಕ್ಷ ನಿರಂಜನ್‌ಕುಮಾರ್ ವಿವರಿಸಿದರು.

ನಿರ್ದೇಶಕರುಗಳಾದ ಅಣ್ಣಮ್ಮ ರಾಜ, ಸತೀಶ, ಮಹೇಶ್‌ಗೌಡ ಜೊತೆಗಿದ್ದರು.

## ಜಗಳೂರು : ಕಾರ್ಮಿಕರಿಗೆ ಕಿಟ್ ವಿತರಣೆ



ಜಗಳೂರು, ಆ.9- ಲಾಕ್ ಡೌನ್‌ನಿಂದ ಸಂಕಷ್ಟಕ್ಕೀಡಾದ ಕಾರ್ಮಿಕರಿಗೆ ಉಚಿತ ಆಹಾರ ಕಿಟ್ ಹಾಗೂ 3 ಸಾವಿರ ಸಹಾಯಧನ ಒದಗಿಸಿ ಸಹಾಯ ಹಸ್ತ ಚಾಚಿರುವ ಬಿಜೆಪಿ ಪಕ್ಷವನ್ನು ಪ್ರತಿಯೊಬ್ಬ ಕಾರ್ಮಿಕರು ಸ್ಮರಿಸಬೇಕು ಎಂದು ಶಾಸಕ ಎಸ್. ವಿ. ರಾಮಚಂದ್ರ ಹೇಳಿದರು. ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಕಾರ್ಮಿಕ ಇಲಾಖೆಯಿಂದ ಆಯೋಜಿಸಿದ್ದ ಕಿಟ್ ವಿತರಣಾ ಕಾರ್ಯಕ್ರಮದಲ್ಲಿ ಕಿಟ್ ವಿತರಿಸಿ ಅವರು ಮಾತನಾಡಿದರು. ತಾಲ್ಲೂಕಿನಲ್ಲಿ 9300 ನೋಂದಾಯಿತ ಕಾರ್ಮಿಕರಿದ್ದು, ಸರ್ಕಾರದಿಂದ 9204 ಕಿಟ್‌ಗಳು ಬಂದಿವೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಪೊಲೀಸ್ ವರಿಷ್ಠಾಧಿಕಾರಿ ರಿಷ್ಯಂತ್, ಜಿ.ಪಂ ಸಿಇಓ ವಿಜಯ್ ಮಹಾಂತೇಶ್ ದಾನಮ್ಮನವರ್, ತಹಶೀಲ್ದಾರ್ ಡಾ. ನಾಗವೇಣಿ, ಕಾರ್ಮಿಕ ಇಲಾಖೆ ಅಧಿಕಾರಿ ಕವಿತ ಮುಂತಾದವರು ಇದ್ದರು.

# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಆಗಸ್ಟ್ 10, 2021




## ಸಿದ್ಧರಾಮೇಶ್ವರರು ಕಾಯಕ ವರ್ಗದವರ ಅಸ್ಮಿತೆ

### ಸಿದ್ಧರಾಮೇಶ್ವರ ದೇವರ 59ನೇ ಸರಳ ರಥೋತ್ಸವದಲ್ಲಿ ಇಮ್ಮಡಿ ಸಿದ್ಧರಾಮೇಶ್ವರ ಶ್ರೀ

ದಾವಣಗೆರೆ, ಆ.9- ಕಾಯಕ ಸಂಸ್ಕೃತಿಯೇ ಶ್ರಮ ಜೀವಿಗಳ ನಿಜವಾದ ಸಂಸ್ಕೃತಿ. ಶ್ರಮದಿಂದ ಕೂಡಿದ ಸತ್ಯ ಶುದ್ಧ ಕಾಯಕ ಜೀವಿಗಳಿಗೆ ವಚನ ಸಂಸ್ಕೃತಿಯಿಂದ ಮೌಢ್ಯಾಚರಣೆ ಮುಕ್ತ ಮತ್ತು ಮೌಲ್ಯಚಾರಣೆಯುಕ್ತ ಅಧ್ಯಾತ್ಮಿಕ, ಶೋಷಣೆ ಮುಕ್ತ ಧಾರ್ಮಿಕತೆ ದೊರೆಯಿತು. ಇದಕ್ಕೆ ಕರ್ಮಯೋಗಿ ಸಿದ್ಧರಾಮೇಶ್ವರರು ಅದ್ಭುತ ಉದಾಹರಣೆ ಎಂದು ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಹೇಳಿದರು.

ನಗರದ ಭೋವಿ ಕಾಲೋನಿಯಲ್ಲಿ ಕೋವಿಡ್ ನಿಯಮಾವಳಿಗಳ ಪ್ರಕಾರ ಸರಳವಾಗಿ ಇಂದು ಜರುಗಿದ ಶಿವಯೋಗಿ ಸಿದ್ಧರಾಮೇಶ್ವರ ದೇವರ 59ನೇ ರಥೋತ್ಸವ ಹಾಗೂ ಲಿಂ. ಶ್ರೀ ಸಿದ್ಧರಾಮೇಶ್ವರ ಮಹಾಸ್ವಾಮೀಜಿಯವರ 19ನೇ ಸಂಸ್ಮರಣೋತ್ಸವದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಬಹಿರಂಗದ ಉತ್ಸವಗಳು ನಿಂತಿರಬಹುದು. ಆದರೆ ಅಂತರಂಗದ ಉತ್ಸಾಹ ನಿಲ್ಲಬಾರದು. ಶರಣರು ಕಾಯಕ ಜೀವಿಗಳು. ಉತ್ಸಾಹದಿಂದ ಕಾಯಕೋತ್ಸವ ಮಾಡಿದವರು. ಸಿದ್ಧರಾಮೇಶ್ವರರು ಕಾಯಕ ವರ್ಗದವರ ಅಸ್ಮಿತೆ. ಮೌಢ್ಯ ಸಂಪ್ರದಾಯಗಳಿಂದ ಮೌಲ್ಯ ಸಂಪ್ರದಾಯಗಳಿಗೆ ನಾಂದಿ ಹಾಡಿದವರು. ಜಲಕ್ರಾಂತಿ ಮೂಲಕ ಸಕಲ ಜೀವಾತ್ಮರಿಗೆ ಲೇಸನ್ನು ಬಯಸಿದವರು. ಮಾನವ ಸಮಾಜದ ಚಿಂತಕ ಸಿದ್ಧರಾಮೇಶ್ವರ. ಸಿದ್ಧರಾಮೇಶ್ವರರು ಜಲ ತಜ್ಞರು. ಸ್ತ್ರೀ ಸಮಾನತೆಗೆ ಧ್ವನಿ ಎತ್ತಿದವರು. ಮಹಿಳೆಯನ್ನು ದೈವಸ್ವರೂಪದಲ್ಲಿ ನೋಡಿದವರು. ವಚನ ಸಂರಕ್ಷಣೆಯಲ್ಲಿ ಅಗ್ರಜ. ಸಿದ್ದರಾಮರ ವಚನಗಳಲ್ಲಿ ಸಮಾಜ ವ್ಯವಸ್ಥೆಯ ಗೊಡ್ಡುತನವನ್ನು, ಹುಸಿ ನಂಬಿಕೆಗಳನ್ನು, ಹೇಯ ಆಚರಣೆಗಳನ್ನು, ಶತಮಾನಗಳ ಭಯ-ಭ್ರಮೆಗಳನ್ನು ಬಯಲು ಮಾಡಿವೆ ಎಂದು ತಿಳಿಸಿದರು.

ಸಮಾಜದ ವಿಮರ್ಶೆಗೆ ಸಂಬಂಧಿಸಿದ ವಚನಗಳಲ್ಲಿ ಎರಡು ಸಿದ್ಧರಾಮ ವಿಡಂಬಿಸುವ ಜಾತಿ ವ್ಯವಸ್ಥೆ, ಕೈಲಾಸದ ಕಲ್ಪನೆ, ಧರ್ಮ ದೇವರುಗಳ ಹೆಸರಿನಲ್ಲಿ ನಡೆಯುವ ಅನೇಕ ಹೇಯಾಚರಣೆಗಳು ಇಂದಿಗೂ ನಡೆಯುತ್ತಲೇ ಇವೆ. ಹೀಗಾಗಿ ಈ ವಚನಗಳು ಹನ್ನೆರಡನೆ ಶತಮಾನದಲ್ಲಿ ರಚಿತವಾದರೂ ಕೂಡ ಇಂದಿನ ಸಮಾಜ ವ್ಯವಸ್ಥೆಯ ಬದುಕಿಗೂ ಪ್ರಸ್ತುತವಾಗಿವೆ. ಅಂತೆಯೇ ಸಿದ್ಧರಾಮರು ಇಂದಿಗೂ ಅನುಕರಣೆಗೆ ಯೋಗ್ಯರಾಗುತ್ತಾರೆ ಎಂದರು.

ಚಿತ್ರದುರ್ಗ ಯಾದವ **(5ನೇ ಪುಟಕ್ಕೆ)**

## ಎಸ್ಸಿ ಮನೆಗೆ 5 ಲಕ್ಷ ರೂ.

ಬೆಂಗಳೂರು, ಆ. 9 - ಪರಿಶಿಷ್ಟ ಜಾತಿಯಲ್ಲಿನ ಬಡ ಕುಟುಂಬಗಳಿಗೆ ಮನೆ ನಿರ್ಮಾಣಕ್ಕೆ ನೀಡುತ್ತಿರುವ ಅನುದಾನವನ್ನು ಐದು ಲಕ್ಷಕ್ಕೆ ಹೆಚ್ಚಿಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ವಿಕಾಸಸೌಧದಲ್ಲಿ ಇಂದು ಹಿರಿಯ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಸ್ತುತ ಪರಿಶಿಷ್ಟ ಜಾತಿಯ ಪ್ರತಿ ಕುಟುಂಬಕ್ಕೆ ಮನೆ ನಿರ್ಮಾಣ ಮಾಡಲು 1.70 ಲಕ್ಷ ನೆರವು ನೀಡಲಾಗುತ್ತಿದೆ ಎಂದರು.

**ಪರಿಶಿಷ್ಟ ಜಾತಿಯ ಪ್ರತಿ ಕುಟುಂಬಕ್ಕೆ ಮನೆ ನಿರ್ಮಾಣ ಮಾಡಲು ನೆರವು ಹೆಚ್ಚಳ**

ಸರ್ಕಾರ ನೀಡುವ ಈ ಹಣದಿಂದ ಅವರು ಒಳ್ಳೆಯ ಸೂರು ನಿರ್ಮಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಇನ್ನು ಮುಂದೆ ಪ್ರತಿ ಫಲಾನುಭವಿಗೆ 5 ಲಕ್ಷ ಅನುದಾನ ನೀಡಲಾಗುವುದು ಎಂದು ತಿಳಿಸಿದರು. ಪರಿಶಿಷ್ಟ ಜಾತಿ ಮತ್ತು ವರ್ಗದ ಅಭಿವೃದ್ಧಿಗೆ ಮೀಸಲಿಟ್ಟಿರುವ ಹಣವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡು ಈ ವರ್ಗಕ್ಕೆ ಶಾಶ್ವತ ಕಾರ್ಯಕ್ರಮ ಅನುಷ್ಠಾನಗೊಳಿಸಲು ಆದ್ಯತೆ ನೀಡಲಾಗುವುದು ಎಂದರು.

ಮನೆ ನಿರ್ಮಾಣಗೊಂಡ ನಂತರ ಎಲ್ಲ ಮೂಲಸೌಕರ್ಯಗಳನ್ನು ಕಲ್ಪಿಸಬೇಕು. ಸಣ್ಣ ಮೊತ್ತದಲ್ಲಿ ಇದು ಸಾಧ್ಯವಾಗದ ಕಾರಣ ಸರ್ಕಾರ ಇಂತಹ ತೀರ್ಮಾನ ಕೈಗೊಂಡಿದೆ. ಮುಂದಿನ ಒಂದು ವರ್ಷ ಕಾಲ ಇಲಾಖೆಯಲ್ಲಿ ಅನಗತ್ಯ ವೆಚ್ಚಕ್ಕೆ ಕಡಿವಾಣ ಹಾಕಲಾಗುವುದು. ಅನಿವಾರ್ಯ ಅಲ್ಲದ ಯೋಜನೆಗಳನ್ನು ಇನ್ನು ಮುಂದೆ ಕೈಬಿಡುವುದಾಗಿ ತಿಳಿಸಿದರು.

ಈ ವರ್ಗದ ಕುಟುಂಬಗಳಿಗೆ ಉತ್ತಮವಾದ ಮನೆ, ಶೌಚಾಲಯ, ಶುದ್ಧ ಕುಡಿಯುವ ನೀರು, ವಿದ್ಯುತ್ ಸಂಪರ್ಕ, ಗುಣಮಟ್ಟದ ಆರೋಗ್ಯ ಸೌಲಭ್ಯ ಮತ್ತು ಅವರ ಮಕ್ಕಳಿಗೆ ಉತ್ತಮವಾದ ಶಿಕ್ಷಣ ನೀಡುವ ಬಗ್ಗೆ ಆದ್ಯತೆ ನೀಡಲಾಗುವುದು.

## ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕ ಪಡೆದ ಹರಿಹರದ ರಕ್ಷಿತಾ ಪಾಟೀಲ್



ಹರಿಹರ, ಆ.9- ತಾಲ್ಲೂಕಿನ ಎರೆಹೊಸಳ್ಳಿ ಗ್ರಾಮದ ಜ್ಞಾನವಿಕಾಸ ವಿದ್ಯಾನಿಕೇತನ ಇಂಗ್ಲಿಷ್ ಮೀಡಿಯಂ ಹೈಸ್ಕೂಲ್ ವಿದ್ಯಾರ್ಥಿ ರಕ್ಷಿತಾ ಪಾಟೀಲ್ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625 ಕ್ಕೆ 625 ಅಂಕಗಳನ್ನು ಪಡೆದಿದ್ದಾಳೆ.

ರಕ್ಷಿತಾ, ಬಾಗಲಕೋಟೆ ಜಿಲ್ಲೆಯ ಚಿಕ್ಕೇರೂರು ಗ್ರಾಮದವರಾದ ಉಮೇಶ್ ಪಾಟೀಲ್ ಮತ್ತು ನೀಲವ್ವ ಪಾಟೀಲ್ ಅವರ ಪುತ್ರಿಯಾಗಿದ್ದು, ಶ್ರೀ ವೇಮನಾನಂದ ಸ್ವಾಮಿಗಳ ವಸತಿ ನಿಲಯದಲ್ಲಿದ್ದು, ಎರೆಹೊಸಳ್ಳಿ ಗ್ರಾಮದ ಶ್ರೀ ಜ್ಞಾನ ವಿಕಾಸ ವಿದ್ಯಾನಿಕೇತನ ಹೈಸ್ಕೂಲ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಳು.

ರಕ್ಷಿತಾ ಪಾಟೀಲ್ ಮಾತನಾಡಿ, ನನಗೆ ಶಾಲೆಯ ಎಲ್ಲಾ ಶಿಕ್ಷಕರು ಉತ್ತಮ ಪ್ರೋತ್ಸಾಹ ನೀಡಿದ್ದು, ನನಗಿಂತ ನನ್ನ ಶಿಕ್ಷಕ ವರ್ಗವು ನಾನು ಹೆಚ್ಚಿನ ಅಂಕಗಳನ್ನು ಪಡೆದುಕೊಳ್ಳುವ ಭರವಸೆ ಇಟ್ಟಿದ್ದರು. ಅದರಂತೆ ಇಂದು ನನ್ನ ಫಲಿತಾಂಶ ಬಂದಿದ್ದು, ನನ್ನ ಎಲ್ಲಾ ಶಿಕ್ಷಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಮುಂದೆ ಉನ್ನತ ಶಿಕ್ಷಣ ಪಡೆದು, ವಿಜ್ಞಾನಿ ಆಗಬೇಕು ಎಂಬ ಮಹದಾಸೆ ಹೊಂದಿದ್ದೇನೆ. ನನಗೆ ಹಾಸ್ಟೆಲ್‌ನಲ್ಲಿ ತಂಗಲು ಅವಕಾಶ ನೀಡಿದ್ದನ್ನು ಸ್ಮರಿಸುತ್ತೇನೆ ಎಂದರು.

**ಎಸ್ಸೆಸ್ಸೆಲ್ಸಿ : ಒಬ್ಬ ಮಾತ್ರ ಫೇಲ್, ಉಳಿದೆಲ್ಲರೂ ಪಾಸ್**

# 157 ವಿದ್ಯಾರ್ಥಿಗಳಿಗೆ 625

### ಉತ್ತೀರ್ಣರಾದ ಎಲ್ಲರಿಗೂ ಮುಂದಿನ ಕಲಿಕೆಗೆ ವ್ಯವಸ್ಥೆ : ಸಚಿವ ನಾಗೇಶ್

ಬೆಂಗಳೂರು, ಆ.9 - ಕಳೆದ ಜುಲೈ ಮಾಹೆಯಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಒಬ್ಬ ವಿದ್ಯಾರ್ಥಿ ಹೊರತುಪಡಿಸಿ, ಉಳಿದೆಲ್ಲರೂ ತೇರ್ಗಡೆಗೊಂಡಿದ್ದಾರೆ.

ಕೊರೊನಾ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಸುರಕ್ಷತೆ ದೃಷ್ಟಿಯಿಂದ ಒಎಂಆರ್ ಆಧಾರಿತ ಪರೀಕ್ಷೆಗಳನ್ನು ನಡೆಸಲಾಗಿತ್ತು.

ಆರು ವಿಷಯಗಳನ್ನು ಎರಡೇ ದಿನಗಳಲ್ಲಿ ಪರೀಕ್ಷೆ ಪೂರ್ಣಗೊಳಿಸಲಾಗಿತ್ತು. ಪರೀಕ್ಷೆಗೆ ಹಾಜರಾದ ಎಲ್ಲಾ ವಿದ್ಯಾರ್ಥಿಗಳನ್ನು ತೇರ್ಗಡೆಗೊಳಿಸುವುದಾಗಿ ಪರೀಕ್ಷಾ ಮುನ್ನವೇ ಸರ್ಕಾರ ಪ್ರಕಟ ಮಾಡಿತ್ತು.

ಆದರೆ ಒಬ್ಬ ವಿದ್ಯಾರ್ಥಿ ತನ್ನ ಬದಲಿಗೆ ಬೇರೆಯವರಿಂದ ಪರೀಕ್ಷೆ ಬರೆಸಿದ್ದು ಆತನನ್ನು ಅನುತ್ತೀರ್ಣಗೊಳಿಸಲಾಗಿದೆ. ಒಟ್ಟಾರೆ ಶೇ. 99.99 ರಷ್ಟು ಫಲಿತಾಂಶ ಬಂದಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಖಾತೆ ನೂತನ ಸಚಿವ ನಾಗೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಳೆದ ವರ್ಷ ಶೇ. 77.74 ರಷ್ಟು ಫಲಿತಾಂಶ ಪ್ರಕಟಗೊಂಡಿತ್ತು. ಈ ಬಾರಿ ಬಹುತೇಕ ಪೂರ್ಣ ಫಲಿತಾಂಶ ಬಂದಿದೆ. ತೇರ್ಗಡೆಗೊಂಡ ಎಲ್ಲ ವಿದ್ಯಾರ್ಥಿಗಳಿಗೂ ಮುಂದಿನ ಕಲಿಕೆಗೆ ಅವಕಾಶ ಮಾಡಿಕೊಡಲಾಗುವುದು ಎಂದವರು ಹೇಳಿದರು.

ಒಟ್ಟಾರೆ ಈ ಬಾರಿ 8,71,443 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅದರಲ್ಲಿ 8,71,442 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ನಗರ ಮತ್ತು ಗ್ರಾಮೀಣ ಪ್ರದೇಶ ಹಾಗೂ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಶೇ. 100 ರಷ್ಟು ಫಲಿತಾಂಶ ಬಂದಿದೆ.

ಈ ಬಾರಿ 625ಕ್ಕೆ 625 ಅಂಕ ಪಡೆದು 157 ವಿದ್ಯಾರ್ಥಿಗಳು ಪ್ರಥಮ ಸ್ಥಾನ ಗಳಿಸಿದ್ದಾರೆ. ನಂತರ 623 ಅಂಕ ಪಡೆದು 289 ವಿದ್ಯಾರ್ಥಿಗಳು, 622 ಅಂಕ ಪಡೆದು 2 ವಿದ್ಯಾರ್ಥಿಗಳು, 621 ಪಡೆದು 449 ಹಾಗೂ 620 ಅಂಕ ಪಡೆದು 21 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದಾರೆ ಎಂದು ಸಚಿವರು ತಿಳಿಸಿದರು.

ಫಲಿತಾಂಶದಲ್ಲಿ ಎ + ಶ್ರೇಣಿಯಲ್ಲಿ 1,28,931 (ಶೇ.16.25) ವಿದ್ಯಾರ್ಥಿಗಳು, ಎ **(4ನೇ ಪುಟಕ್ಕೆ)**

## ಜಿಲ್ಲೆಯಲ್ಲಿ 21,720 ವಿದ್ಯಾರ್ಥಿಗಳು ಪಾಸ್

### ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೇ ಹೆಚ್ಚು ಎ+ ಶ್ರೇಣಿ

ದಾವಣಗೆರೆ, ಆ.9- ಜಿಲ್ಲೆಯಲ್ಲಿ ಪರೀಕ್ಷೆ ಬರೆದಿದ್ದ 21,720 ವಿದ್ಯಾರ್ಥಿಗಳೂ ಸಹ ಉತ್ತೀರ್ಣರಾಗಿದ್ದಾರೆ. ಕಳೆದ ಜುಲೈ 19 ಹಾಗೂ 22ನೇ ತಾರೀಖಿನಂದು ಎರಡು ದಿನಗಳ ಕಾಲ ನಡೆದ ಪರೀಕ್ಷೆಯಲ್ಲಿ ಹೊಸ ವಿದ್ಯಾರ್ಥಿಗಳು, ಹಳೆಯ ಹಾಗೂ ಖಾಸಗಿ ವಿದ್ಯಾರ್ಥಿಗಳ ಪೈಕಿ 11,185 ಬಾಲಕರು ಹಾಗೂ 10535 ಬಾಲಕಿಯರು ಪರೀಕ್ಷೆ ಬರೆದಿದ್ದರು.

ಕಳೆದ ಬಾರಿ ರಾಜ್ಯದ ಪಟ್ಟಿಯಲ್ಲಿ ಜಿಲ್ಲೆಯು 17ನೇ ಸ್ಥಾನ ಪಡೆದಿತ್ತು. ಆದರೆ ಯಾವ ವಿದ್ಯಾರ್ಥಿಯೂ 625 ಪಡೆದಿರಲಿಲ್ಲ. ಆದರೆ ಈ ಬಾರಿ ನಾಲ್ವರು 625ಕ್ಕೆ 625 ಅಂಕಗಳನ್ನು ಗಳಿಸಿದ್ದಾರೆ.

ಜಿಲ್ಲೆಯ ಸರ್ಕಾರಿ ಶಾಲೆಯ 1128, ಅನುದಾನಿತ ಶಾಲೆಯ 878 ಹಾಗೂ ಅನುದಾನ ರಹಿತ 726 ವಿದ್ಯಾರ್ಥಿಗಳು ಎ+ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ಬಹುತೇಕ ಖಾಸಗಿ ಶಾಲೆಗಳು ಆನ್‌ಲೈನ್ ತರಗತಿಗಳನ್ನು ನಡೆಸುತ್ತಿದ್ದವು. ಆದಾಗ್ಯೂ ಸರ್ಕಾರಿ ಶಾಲೆಯ ಹೆಚ್ಚಿನ ಮಕ್ಕಳು ಉನ್ನತ ಶ್ರೇಣಿಯಲ್ಲಿ **(4ನೇ ಪುಟಕ್ಕೆ)**

## ಜಿಲ್ಲೆಯಲ್ಲಿ ನಾಲ್ವರು ಟಾಪರ್ಸ್



ಅನುಷಾ ವಿಜೇತ ಮೋನಿಷಾ ರಕ್ಷಿತಾ

**ಜಿಲ್ಲೆಯ ನಾಲ್ವರು ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳನ್ನು ಪಡೆದಿದ್ದಾರೆ. ನಗರದ ಶ್ರೀ ಸಿದ್ಧಗಂಗಾ ಪ್ರೌಢಶಾಲೆಯ ವಿದ್ಯಾರ್ಥಿನಿಯರಾದ ಅನುಷಾ ಹಾಗೂ ವಿಜೇತ ಬಸವರಾಜ ಮುತ್ತಗಿ, ಶ್ರೀ ತರಳಬಾಳು ಪ್ರೌಢಶಾಲೆಯ ಮೋನಿಷಾ ಎಂ.ಎಸ್. ಹಾಗೂ ಹರಿಹರದ ಶ್ರೀ ಜ್ಞಾನಾಕ್ಷಿ ವಿದ್ಯಾನಿಕೇತನ ಪ್ರೌಢಶಾಲೆಯ ರಕ್ಷಿತಾ ಉಮೇಶ್ ಪಟೇಲ್ 625 ಅಂಕ ಪಡೆದು ಜಿಲ್ಲೆಗೆ ಮೊದಲಿಗರಾಗಿದ್ದಾರೆ.**

## ಒಬಿಸಿ ಮಸೂದೆಗೆ ಗದ್ದಲ ನಿಲ್ಲಿಸಿದ ಸಂಸದರು

### ರಾಜ್ಯಗಳಿಗೆ ಒಬಿಸಿ ಪಟ್ಟಿ ರೂಪಿಸುವ ಅಧಿಕಾರ ನೀಡುವ ಸಂವಿಧಾನ ತಿದ್ದುಪಡಿ ಮಸೂದೆಗೆ ವಿಪಕ್ಷಗಳ ಬೆಂಬಲ

ನವದೆಹಲಿ, ಆ. 9 – ಮುಂಗಾರು ಅಧಿವೇಶನದುದ್ದಕ್ಕೂ ಪ್ರತಿಪಕ್ಷಗಳ ಗದ್ದಲ ಕಾಣುತ್ತಾ ಬಂದಿದ್ದ ಲೋಕಸಭೆ, ಸೋಮವಾರದಂದು ಬದಲಾವಣೆ ಕಂಡಿತ್ತು. ರಾಜ್ಯಗಳು ಇತರೆ ಹಿಂದುಳಿದ ವರ್ಗಗಳ ಪಟ್ಟಿ (ಒ.ಬಿ.ಸಿ.) ರೂಪಿಸಲು ರಾಜ್ಯಗಳಿಗೆ ಅಧಿಕಾರ ನೀಡುವ ಮಸೂದೆ ಮಂಡನೆ ಸಂದರ್ಭದಲ್ಲಿ ಪ್ರತಿಪಕ್ಷಗಳು ಬೆಂಬಲ ನೀಡಿದವು.

ಸಂವಿಧಾನಕ್ಕೆ 127ನೇ ತಿದ್ದುಪಡಿ ತರುವ ಮಸೂದೆ ಮಂಡನೆಯಾದಾಗ ಪ್ರತಿಪಕ್ಷಗಳ ಸದಸ್ಯರು ತಮ್ಮ ಸ್ಥಾನಗಳಿಗೆ ತೆರಳಿದ್ದರು. ಸಂವಿಧಾನ ತಿದ್ದುಪಡಿ ಮಸೂದೆ ಮಂಡಿಸುವಾಗ ಸದನ ಶಾಂತವಾಗಿರಬೇಕಾಗುತ್ತದೆ.

ಯಾವುದೇ ಪಕ್ಷ ಒ.ಬಿ.ಸಿ. ಹಿತ ವಿರೋಧಿ ಎಂಬ ಭಾವನೆ ಬರುವುದನ್ನು ಬಯಸಿದಂತೆ ಕಂಡು ಬರಲಿಲ್ಲ.

ಕಾಂಗ್ರೆಸ್, ಡಿಎಂಕೆ ಹಾಗೂ ಬಿ.ಎಸ್.ಪಿ. ಸೇರಿದಂತೆ ಹಲವು ಪಕ್ಷಗಳು ಮಸೂದೆಯನ್ನು ಬೆಂಬಲಿಸಿದವು. ಆದರೆ, ಗದ್ದಲದ ನಡುವೆ ಶಾಸನಗಳನ್ನು ಮಂಡಿಸುತ್ತಿರುವ ಬಗ್ಗೆ ಆಕ್ಷೇಪಿಸಿದವು.

ಒ.ಬಿ.ಸಿ. ಹೊರತು ಪಡಿಸಿ ಉಳಿದ ಮಸೂದೆಗಳ ಮಂಡನೆ ಸಂದರ್ಭದಲ್ಲಿ ಪ್ರತಿಪಕ್ಷಗಳ ಸದಸ್ಯರು ಗದ್ದಲ ಮುಂದುವರೆಸಿದರು.

ಗದ್ದಲದ ನಡುವೆಯೇ ಸಹಭಾಗಿತ್ವ ಸೀಮಿತ ಹೊಣೆಗಾರಿಕೆ (ತಿದ್ದುಪಡಿ) ಮಸೂದೆ, ವಿಮೆ ಹಾಗೂ ಸಾಲ ಗ್ಯಾರಂಟಿ ನಿಗಮ (ತಿದ್ದುಪಡಿ) ಮಸೂದೆ ಹಾಗೂ ಸಂವಿಧಾನ (ಪರಿಶಿಷ್ಟ ಪಂಗಡ) ಆದೇಶ (ತಿದ್ದು ಪಡಿ) ಮಸೂದೆಗಳಿಗೆ ಅಂಗೀಕಾರ ನೀಡಲಾಯಿತು.

ಈ ಬಗ್ಗೆ ಆಕ್ಷೇಪಿಸಿದ ಆರ್.ಎಸ್.ಪಿ.ಯ ಸಂಸದ ಎನ್.ಕೆ. ಪ್ರೇಮಚಂದ್ರನ್, ಹತ್ತು ನಿಮಿಷಗಳಲ್ಲಿ ಮೂರು ಮಸೂದೆಗಳನ್ನು ಜಾರಿಗೆ ತರುವುದೆಂದರೆ ದೋಸೆ ತಿರುವಿ ಹಾಕಿದಂತೆ ಎಂದರು.

ಗದ್ದಲದ ನಡುವೆ ಹೋಮಿಯೋಪತಿ ರಾಷ್ಟ್ರೀಯ ಆಯೋಗ (ತಿದ್ದುಪಡಿ) ಮಸೂದೆ ಹಾಗೂ ರಾಷ್ಟ್ರೀಯ ವೈದ್ಯಕೀಯ ವ್ಯವಸ್ಥೆ ಆಯೋಗ (ತಿದ್ದುಪಡಿ) ಮಸೂದೆಗಳನ್ನೂ ಸಹ ಮಂಡಿಸಲಾಯಿತು.

ಸದನ ಸಮರ್ಪಕವಾಗಿರದೇ ಇದ್ದ ಸಂದರ್ಭದಲ್ಲಿ ಮಸೂದೆ ಮಂಡಿಸುವ ಮೂಲಕ ಸರ್ಕಾರ ಸಂವಿಧಾನದ ನಿಯಮಗಳನ್ನು ಉಲ್ಲಂಘಿಸುತ್ತಿದೆ ಎಂದು ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಹಾಗೂ ಮನೀಶ್ ತಿವಾರಿ ಆಕ್ಷೇಪಿಸಿದರು.

## ರಾಜ್ಯದ ನೀರು ಪೂರ್ಣ ಬಳಕೆ

### ಅಧಿಕಾರಿಗಳಿಗೆ ಸಚಿವ ಕಾರಜೋಳ ಸೂಚನೆ

ಬೆಂಗಳೂರು, ಆ.9 - ರಾಜ್ಯಕ್ಕೆ ಹಂಚಿಕೆಯಾಗಿರುವ ನೀರು ಪೂರ್ಣ ಪ್ರಮಾಣದಲ್ಲಿ ಸದ್ಬಳಕೆಯಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ನೂತನ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರು ಜಲ ಸಂಪನ್ಮೂಲ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕರ್ನಾಟಕ ನೀರಾವರಿ ನಿಗಮದಲ್ಲಿಂದು ಜಲ ಸಂಪನ್ಮೂಲ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಪ್ರಪ್ರಥಮ ಸಭೆ ನಡೆಸಿ ಪ್ರಗತಿ ಪರಿಶೀಲನೆ ನಡೆಸಿದ ಅವರು, ರಾಜ್ಯದ ವಿವಿಧ ಜಲಾಶಯಗಳ ನೀರನ್ನು ನ್ಯಾಯಾಲಯವು /ಜಲ ವಿವಾದ ನ್ಯಾಯಾಧಿಕರಣವು ನೀಡಿದ ತೀರ್ಪಿನಲ್ಲಿ ರಾಜ್ಯಕ್ಕೆ ಹಂಚಿಕೆಯಾದ ನೀರು ಪೂರ್ಣಪ್ರಮಾಣದಲ್ಲಿ ಸದ್ಬಳಕೆಯಾಗಬೇಕು ಎಂದು ತಿಳಿಸಿದರು.

ರಾಜ್ಯದಲ್ಲಿ 140 ಲಕ್ಷ ಹೆಕ್ಟೇರ್ ಪ್ರದೇಶವು ವ್ಯವಸಾಯಕ್ಕೆ ಯೋಗ್ಯವಾಗಿದ್ದು, 40.66 ಲಕ್ಷ ಹೆಕ್ಟೇರ್ ಪ್ರದೇಶವು ಅದರಲ್ಲಿ ಬೃಹತ್ ಮತ್ತು ಮಧ್ಯಮ ಜಲ ಸಂಪನ್ಮೂಲ ಇಲಾಖೆಯ ಯೋಜಿತ ನೀರಾವರಿ ಕ್ಷೇತ್ರವಾಗಿದೆ. ಅದರಲ್ಲಿ 29.18 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ **(4ನೇ ಪುಟಕ್ಕೆ)**

## 23 ರಿಂದ ಪದವಿ ಕಾಲೇಜು ಪ್ರವೇಶ

ಬೆಂಗಳೂರು, ಆ. 9 - ಇದೇ ದಿನಾಂಕ 23 ರಿಂದಲೇ ಪದವಿ ಕಾಲೇಜುಗಳ ಪ್ರವೇಶ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿ ಮಾಡುವ ನಿಟ್ಟಿನಲ್ಲಿ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಉಪ ಕುಲಪತಿಗಳ ಜೊತೆ ಸಭೆ ನಡೆಸಿದ ನಂತರ ಮಾತನಾಡುತ್ತಿದ್ದ ಅವರು, ಹೊಸದಾಗಿ ರೂಪಿಸಲಾಗಿರುವ ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ ಮೂಲಕ ದಾಖಲಾತಿ ಪ್ರಕ್ರಿಯೆ ಆರಂಭ ಮಾಡಲಾಗುವುದು. ಅದರ ಮಾದರಿಯನ್ನೂ ಉದ್ಘಾಟಿಸಲಾಗುವುದು ಎಂದು ತಿಳಿಸಿದ್ದಾರೆ.

## ಸರ್ಕಾರದಿಂದ ವಿದ್ಯಾರ್ಥಿಗಳ ಬದುಕು ನಾಶ

### ಜನಾಂದೋಲನ ಜಾಗೃತಿ ಸಭೆಯಲ್ಲಿ ಡಾ. ಸಿದ್ಧನಗೌಡ ಪಾಟೀಲ್




ದಾವಣಗೆರೆ, ಆ.9- ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಶಾಲಾ-ಕಾಲೇಜು, ಶಿಕ್ಷಣ ಸಂಸ್ಥೆಗಳು ಮುಚ್ಚಿದ್ದರಿಂದ, ಪ್ರಾಯೋಗಿಕ ಶಿಕ್ಷಣ ನೀತಿ ರೂಪಿಸದೇ ಇರುವುದರಿಂದ ವಿದ್ಯಾರ್ಥಿಗಳ 2 ವರ್ಷದ ಶೈಕ್ಷಣಿಕ ಬದುಕು ನಾಶವಾಗಿದೆ. ಈ ಸ್ಥಿತಿಗೆ ಸರ್ಕಾರಗಳೇ ಹೊಣೆ ಹೊರಬೇಕಾಗುತ್ತದೆ ಎಂದು ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯರೂ, ಹೊಸತು ಮಾಸ ಪತ್ರಿಕೆ ಸಂಪಾದಕ ಡಾ. ಸಿದ್ದನಗೌಡ ಪಾಟೀಲ್ ವಾಗ್ದಾಳಿ ನಡೆಸಿದರು.

ಭಾರತ್ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಮಂಡಳಿ ವತಿಯಿಂದ ನಗರದ ಕಾಂ. ಪಂಪಾಪತಿ ಭವನದಲ್ಲಿ ಇಂದು ಹಮ್ಮಿಕೊಂಡಿದ್ದ ಬಡತನ, ಹಸಿವು, ನಿರುದ್ಯೋಗ, ಅಸಮಾನತೆ, ಅನ್ಯಾಯಗಳಿಗೆ ಕಾರಣವಾದ ಜೀವ ವಿರೋಧಿ, ಜನ ವಿರೋಧಿ ಸರ್ಕಾರಗಳನ್ನು 'ಅಧಿಕಾರದಿಂದ ತೊಲಗಿಸಿ' ಜನಾಂದೋಲನ ಜಾಗೃತಿ ಸಭೆಯನ್ನು ಜನಾಂದೋಲನ ಕುರಿತ ಕಿರು ಹೊತ್ತಿಗೆ ಬಿಡುಗಡೆ ಮಾಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ತೋರಿಕೆಗಾಗಿ ಪ್ರಯೋಗಿಸಲಾದ ಆನ್‌ಲೈನ್ ಮತ್ತು ದೂರಶಿಕ್ಷಣ ವ್ಯವಸ್ಥೆ ಬಡವರು, ರೈತರು, ಮಧ್ಯಮ ವರ್ಗದವರು ಹಾಗೂ ಗ್ರಾಮೀಣ ಜನರಿಗೆ ನಿಲುಕಲಿಲ್ಲ. ಬಡವರಿಗೆ ದುಬಾರಿ ಫೋನ್ ಕೊಡಿಸಿ ಆ ಮೂಲಕ ಶಿಕ್ಷಣ ಕೊಡಿಸಲು ಸಾಧ್ಯವಾಗಲಿಲ್ಲ. ಫೋನ್ ಸೌಲಭ್ಯ ಕಲ್ಪಿಸಿದ್ದರೂ, ನೆಟ್‌ವರ್ಕ್ ಸಮಸ್ಯೆ ಕಾಡುತ್ತಿತ್ತು. ಇದರ ಪರಿಣಾಮ ಮಕ್ಕಳು ಶಿಕ್ಷಣ ವಂಚಿತರಾದರು. ಮತ್ತೊಂದೆಡೆ ಬಾಲಕಾರ್ಮಿಕ ಪದ್ಧತಿ ಹಾಗೂ ಬಾಲ್ಯವಿವಾಹಕ್ಕೆ ಬಲಿಯಾದರು. ಇನ್ನೊಂದೆಡೆ ಸರ್ಕಾರ ಮಧ್ಯಾಹ್ನ ಬಿಸಿಯೂಟ ಸೌಲಭ್ಯಕ್ಕೆ ಕತ್ತರಿ **(4ನೇ ಪುಟಕ್ಕೆ)**

## ತಾಪಮಾನ ಏರಿಕೆಯ ಎಚ್ಚರಿಕೆ

### ಶತಮಾನದ ಅವಘಡಗಳು ಪ್ರತಿ ವರ್ಷ ಸಂಭವಿಸಬಹುದು ಎಂದ ಐ.ಪಿ.ಸಿ.ಸಿ.

ನವದೆಹಲಿ, ಆ. 9 - ಈ ಹಿಂದೆ 100 ವರ್ಷಕ್ಕೊಮ್ಮೆ ಸಂಭವಿಸುತ್ತಿದ್ದ ಸಮುದ್ರ ಅವಘಡಗಳು ತಾಪಮಾನ ಹೆಚ್ಚಳದ ಕಾರಣದಿಂದಾಗಿ ಪ್ರತಿ ವರ್ಷ ಸಂಭವಿಸಬಹುದು ಎಂದು ಪರಿಸರ ಬದಲಾವಣೆ ಕುರಿತ ಐ.ಪಿ.ಸಿ.ಸಿ. ವರದಿ ತಿಳಿಸಿದೆ.

ಸಮುದ್ರ ಮಟ್ಟದಲ್ಲಿ ಹೆಚ್ಚಳ, ಪ್ರವಾಹ, ಭಾರೀ ಮಳೆ ಹಾಗೂ ನೀರ್ಗಲ್ಲುಗಳ ಕರಗುವಿಕೆಯಿಂದ ಬದಲಿಸಲಾಗದಂತಹ ಪರಿಣಾಮಗಳಾಗುತ್ತವೆ. ಪ್ರಪಂಚದ ಪ್ರತಿಯೊಂದು ಭಾಗವೂ ಈ ಬದಲಾವಣೆ ಕಾಣಲಿದೆ ಎಂದು ಐ.ಪಿ.ಸಿ.ಸಿ. (ಪರಿಸರ ಬದಲಾವಣೆ ಕುರಿತ ಅಂತರ ಸರ್ಕಾರ ಸಮಿತಿ) ರೂಪಿಸಿರುವ ಪರಿಸರ ಬದಲಾವಣೆ ಕುರಿತ 2021ರ ವರದಿ ಹೇಳಿದೆ.

ಕರಾವಳಿಯಲ್ಲಿ ಸಮುದ್ರ ಮಟ್ಟ ಏರುವುದು 21ನೇ ಶತಮಾನದ ಉದ್ದಕ್ಕೂ ಮುಂದುವರೆಯಲಿದೆ. ಕರಾವಳಿಯ ತಗ್ಗು **(5ನೇ ಪುಟಕ್ಕೆ)**

## 23 ರಿಂದ 9 ರಿಂದ 12ನೇ ತರಗತಿಗಳು ಆರಂಭ

ಬೆಂಗಳೂರು, ಆ. 9 - ರಾಜ್ಯದಲ್ಲಿ 9 ರಿಂದ 12ನೇ ತರಗತಿಗಳು ಇದೇ ದಿನಾಂಕ 23 ರಿಂದ ಶುರುವಾಗಲಿವೆ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಗಡಿ ಜಿಲ್ಲೆಗಳಲ್ಲಿ ಪರಿಸ್ಥಿತಿ ನೋಡಿಕೊಂಡು ಶಾಲೆಗಳನ್ನು ತೆರೆಯಲಾಗುವುದು ಎಂದು ತಿಳಿಸಿದರು.

ಇದೇ ದಿನಾಂಕ 23 ರಿಂದ ಆನ್ ಲೈನ್ ಹಾಗೂ ಆಫ್ ಲೈನ್ ಎರಡರಲ್ಲೂ ತರಗತಿಗಳು ನಡೆಯಲಿದ್ದು, ಹಾಜರಾತಿ ಕಡ್ಡಾಯ ಇರಲಿದೆ ಎಂದವರು ಹೇಳಿದ್ದಾರೆ.

**ಮನೆ ಬಾಡಿಗೆಗೆ ಇದೆ**
ದೇವರಾಜ್ ಅರಸ್ ಬಡಾವಣೆ, 'ಸಿ' ಬ್ಲಾಕ್, 1ನೇ ಕ್ರಾಸ್, ಮೈಲಾರಲಿಂಗೇಶ್ವರ ದೇವಸ್ಥಾನದ ಹತ್ತಿರ, ಡಬಲ್ ಬೆಡ್ ರೂಂ ಮನೆ, 2ನೇ ಮಹಡಿ, ನಲ್ಲಿ ನೀರು ಮತ್ತು ಬೋರ್‌ವೆಲ್ ನೀರಿನ ವ್ಯವಸ್ಥೆ ಇದೆ.
98458 40604, 99805 32781

**ಸೈಟು ಮಾರಾಟಕ್ಕೆ (ಉತ್ತರ)**
ಶಾಮನೂರು ಡಾಲರ್ಸ್ ಕಾಲೋನಿ (ಮನೆ ಕಟ್ಟಲು ತುಂಬಾ ಚೆನ್ನಾಗಿದೆ)
40x58 ಉತ್ತರ.
ಬೂಸ್ನೂರ್ ಕಿರಣ್ (ಏಜೆಂಟ್)
(ನೇರವಾಗಿ ರಿಜಿಸ್ಟರ್ ಮಾಲೀಕರಿಂದ ಹಾಗೂ ಕೇವಲ ಅರ್ಧ ಪರ್ಸೆಂಟ್ (1/2 %) ಕಮೀಷನ್‌ಗೆ)
ಆಫೀಸ್ ನಂ. 97315-63409, 98440-63409

**ಲೀಸ್ 12 ಲಕ್ಷ/ಬಾಡಿಗೆ 10,500**
ZP, TV ಸ್ಟೇಷನ್, ನ್ಯಾಯಾಲಯ, ಹೈಟೆಕ್ ಆಸ್ಪತ್ರೆ, ಸರ್.ಎಂ.ವಿ, ಲಲಿತ ಕಾಲೇಜ್, ಶಶಿ ಸೋಪ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ ಸುಸಜ್ಜಿತ ನೀರು ಲಿಫ್ಟ್, ಕಾರ್ ಪಾರ್ಕಿಂಗ್‌ವುಳ್ಳ ಉತ್ತರ ದಿಕ್ಕಿನ 2 ಬೆಡ್ ರೂಂ ವಾಸ್ತು ಪ್ರಕಾರವಿದೆ.
99865 38099, 99004 11110

**ಸೈಟು ಬೇಕಿದೆ (ನೆಲಮಂಗಲದಲ್ಲಿ)**
ನೆಲಮಂಗಲ ಸೊಂಡೆಕೊಪ್ಪ ರೋಡ್, ತರಳಬಾಳು ನಗರದಲ್ಲಿ
ಕಿರಣ್ ಬೂಸ್ನೂರ್ : 98440-63409

**ಸೈಟ್ ಮಾರಾಟಕ್ಕೆ (ಕಾರ್ನರ್)**
ಕರ್ನಾಟಕ ಗೃಹ ಮಂಡಳಿಯಲ್ಲಿ
1) 50X80 ಉತ್ತರ, ಪಶ್ಚಿಮ. 2) 40x40 ದಕ್ಷಿಣ, ಪಶ್ಚಿಮ. 3) 50x100 ದಕ್ಷಿಣ, ಪಶ್ಚಿಮ. 4) ಉತ್ತರ. ಪೂರ್ವ. 5) 60x90 ಪೂರ್ವ. 50x80 ದಕ್ಷಿಣ. 40x60 ಪೂರ್ವ. 30x50 ಪಶ್ಚಿಮ. 30x40 ಉತ್ತರ
ಕಿರಣ್ ಬೂಸ್ನೂರ್ : 98440-63409

**WANTED TEACHERS**
B.A., B.Sc. / D.Ed. B.Ed. - 4 Posts
To teach for 1st to 8th Std.
Contact with Originals
9980148289, 6361662669

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆ ಪೂರ್ವ 40x65 (ಅಕ್ಕ-ಪಕ್ಕ), 30x50, 40x38, 32x35 (ಅಕ್ಕ-ಪಕ್ಕ) ಪಶ್ಚಿಮ 38x40, 40x30, 30x46, ಪೂರ್ವ-ಉತ್ತರ ಕಾರ್ನರ್ (40x65) ವಿನಾಯಕ ಬಡಾವಣೆ 40x50 ದಕ್ಷಿಣ-ಪಶ್ಚಿಮ ಕಾರ್ನರ್
ಐಗೂರು ವಿಜಯ್‌ಕುಮಾರ್
99457 02495

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. 'ಎ' ಬ್ಲಾಕ್ (ಅಥಣಿ ಕಾಲೇಜ್ ಹತ್ತಿರ) ಕೆಳಗೆ ಮನೆ, 1 ಮಳಿಗೆ ಮೇಲೆ ಮನೆ ಮತ್ತೆ ಮೇಲೆ 2 ರೂಂ (30x42), ಉತ್ತರ 30x50 ಕೆಳಗೆ 3BHK ಮೇಲೆ 1 BHK 2 ಮನೆ ಮತ್ತೆ ಮೇಲೆ 2 ರೂಂ ಎಂಸಿಸಿ ಬಿ ಬ್ಲಾಕ್ ಪೂರ್ವ 44x60 (ಡೂಪ್ಲೆಕ್ಸ್)
ಐಗೂರು ವಿಜಯ್‌ಕುಮಾರ್
99457 02495

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಸಮಾಜ ಸೇವೆಯಲ್ಲಿ ಆಸಕ್ತಿಯುಳ್ಳ ಉತ್ಸಾಹಿ ಕೆಲಸದ ಅನುಭವ ಇರುವ ವಿವಾಹಿತ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದರೆ. ಸಂಪರ್ಕಿಸಿ
83105 20002

**ಬೇಕಾಗಿದ್ದಾರೆ**
ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ರಾಂ ಅಂಡ್ ಕೋ ಸರ್ಕಲ್ ಹತ್ತಿರ. ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ.
70221 58935

**ಮನೆ ಲೀಜ್‌ಗೆ ಇದೆ**
ಶಾಮನೂರು ಮಲ್ಲಿಕಾರ್ಜುನ್ ಬಡಾವಣೆಯಲ್ಲಿ 15x40 ಅಳತೆಯ, ಸ್ವಂತ ಬೋರ್‌ವೆಲ್ ಇರುವ ಮನೆ ಲೀಸ್‌ಗೆ ಇದೆ. ಸಂಪರ್ಕಿಸಿ
94486 85660

**ಮನೆ ಬಾಡಿಗೆಗೆ ಇದೆ**
ಮನೆ ನಂ.4575/25 ಗ್ರೌಂಡ್ ಫ್ಲೋರ್ ಸಿದ್ದವೀರಪ್ಪ ಬಡಾವಣೆ 6ನೇ ಕ್ರಾಸ್ ಸಿಹಿ ನೀರು ಮತ್ತು ಬೋರ್‌ವೆಲ್ ನೀರಿನ ವ್ಯವಸ್ಥೆ ಇರುವ ಪೂರ್ವ ದಿಕ್ಕಿನ 2 BHK ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
ಮೊ: 94483 92526

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ರೂಂಗಳು ಬಾಡಿಗೆಗೆ ಇವೆ**
ಸುಸಜ್ಜಿತ ಹಾಗೂ ಎಲ್ಲಾ ಸೌಕರ್ಯಗಳನ್ನು ಹೊಂದಿರುವ ರೂಂಗಳು ಬಾಡಿಗೆಗೆ ದೊರೆಯುತ್ತವೆ. ಸರಸ್ವತಿ ಬಡಾವಣೆ, ಕೆನರಾ ಬ್ಯಾಂಕ್ ಹತ್ತಿರ, ನಿಟುವಳ್ಳಿ, ದಾವಣಗೆರೆ.
81055 42689

**ಮಳಿಗೆ ಬಾಡಿಗೆಗೆ ಇದೆ**
ಪಿ.ಬಿ. ರೋಡ್, ಜಿಎಂಐಟಿ ರಸ್ತೆ, ಓಷನ್ ಪಾರ್ಕ್ ಹೋಟೆಲ್ ಪಕ್ಕ, ದಾವಣಗೆರೆ.
99023 55999, 99017 51395

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ ಸಂಪರ್ಕಿಸಿ :
81472 61158

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿಕೊಳ್ಳಿ, ಕಡಿಮೆ ದರದಲ್ಲಿ
72046 33302

**ಜನ್ಮಾಂತರ ಚಿಕಿತ್ಸೆ**
ದೈಹಿಕ ಮತ್ತು ಮಾನಸಿಕ ಅನಾರೋಗ್ಯ, ರಾಜಕೀಯ, ವ್ಯಾಪಾರ, ವೈವಾಹಿಕ, ಸಂತಾನ, ಆಸ್ತಿ ಮತ್ತು ಕುಟುಂಬ ಕಲಹ, ಶತ್ರು ಬಾಧೆ, ಮಾಟ ಮಂತ್ರ, ಪ್ರೇತ ಬಾಧೆ ಹಾಗೂ ಜನ್ಮಾಂತರದ ದೋಷಗಳ ಸಂಪೂರ್ಣ ನಿವಾರಣೆಗಾಗಿ
76767 50280

**ಲಿಂಗಾಯತ ವಧು-ವರ**
ಲಿಂಗಾಯತ ಜಂಗಮ ಇಂಜಿನಿಯರ್, ಡಾಕ್ಟರ್, ಸರ್ಕಾರಿ ಹಾಗೂ ಖಾಸಗಿ ನೌಕರಿಯಲ್ಲಿರುವ ವಧು-ವರರಿಗಾಗಿ ಹಾಗೂ ವಿಧವೆ, ವಿಧುರ, ವಿಚ್ಛೇದಿತರ ಮರು ಮದುವೆಗಾಗಿ ಸಂಪರ್ಕಿಸಿ
ಮೊ: 98807 29108

**ಗೀತಾಂಜಲಿ ಹೋಂ ಪ್ರಾಡಕ್ಟ್ಸ್**
ನಮ್ಮಲ್ಲಿ ಹಬ್ಬಕ್ಕೆ ಬೇಕಾದ ಉಂಡೆಗಳು, ಕರ್ಜಿಕಾಯಿ, ಹೋಳಿಗೆ, ಚಕ್ಕುಲಿ, ಹಾಗೂ ಕಾರದ ತಿಂಡಿಗಳನ್ನು ಆರ್ಡರ್ ಕೊಟ್ಟಲ್ಲಿ ಫ್ರೆಶ್ ಆಗಿ ಶುಚಿ ಮತ್ತು ರುಚಿಯಾಗಿ ತಯಾರಿಸಿ ಕೊಡುತ್ತೇವೆ.
ಸಂಪರ್ಕಿಸಿ
96209 36944,94491 69076

**ಹೆಸರು ಬದಲಾವಣೆ**
ಶ್ರೀ ಪರಮೇಶ್ವರ ನಾಯ್ಕ ಬಿನ್ ಥಾಕ್ಯ ನಾಯ್ಕ, 43 ವರ್ಷ #00, ರಿಂಗ್ ರೋಡ್, 1ನೇ ಕ್ರಾಸ್, ವಿನಾಯಕ ನಗರ, ದಾವಣಗೆರೆ ತಾ, ಜಿಲ್ಲೆ ಮೇಲ್ಕಂಡ ವಿಳಾಸದಲ್ಲಿ ಖಾಯಂ ಆಗಿ ವಾಸಿಯಾಗಿದ್ದು ನಾನು ನನ್ನ ಹೆಸರು ಆಧಾರ್ ಕಾರ್ಡ್‌ನಲ್ಲಿ ಡಿ.ಪರಮೇಶ ನಾಯ್ಕ (D. PARAMESHA NAIK) ಎಂದು, ಡಿ.ಎಲ್‌ನಲ್ಲಿ ಪರಮೇಶ್ವರ ನಾಯ್ಕ ಎಂದು ನಮೂದಾಗಿದ್ದು ಈ ಎರಡೂ ಹೆಸರು ನನಗೆ ಅನ್ವಯವಾಗುತ್ತವೆ. ಇನ್ನು ಮುಂದೆ ನನ್ನ ಎಲ್ಲಾ ವ್ಯವಹಾರಗಳಲ್ಲಿ ನನ್ನ ಹೆಸರನ್ನು ಡಿ.ಪರಮೇಶ ನಾಯ್ಕ (D. PARAMESHA NAIK) ಎಂದು ಈ ಮೂಲಕ ದೃಢೀಕರಿಸುತ್ತೇನೆ.
ಸಹಿ: ಡಿ. ಪರಮೇಶ ನಾಯ್ಕ

**ಮಾಂತ್ರಿಕ ಮೋಡಿ ಬೆಟ್ಟಪ್ಪ**
**ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ವಾರದ ಚೀಟಿ ಪ್ರಾರಂಭ**
ರೂ.1 ಲಕ್ಷದ ಚೀಟಿ ಪ್ರಾರಂಭ
50 ವಾರಗಳು & 50 ಸದಸ್ಯರು
2000/- ರೂ ಕಂತು ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ)
84531 61869

## ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಶ್ರೀ ಡಿ. ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ಪಿ.ಬಿ.ರಸ್ತೆ, ದಾವಣಗೆರೆ–06

ನಂ:ದಾಹನಪ್ರಾ:ಎಇಇ:ಸಿಆರ್:01:2021–22/785 ದಿನಾಂಕ:09–08–2021.

**ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವ ವಸತಿ ಬಡಾವಣೆಯಲ್ಲಿ ಮನೆ/ನಿವೇಶನ ಹಂಚಿಕೆಗೆ ಬೇಡಿಕೆ ಸಮೀಕ್ಷೆ ಪ್ರಕಟಣೆ**

ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ದಾವಣಗೆರೆ ತಾಲ್ಲೂಕು ಕುಂದುವಾಡ ಗ್ರಾಮದ ವಿವಿಧ ರಿಸನಂ: 125,126,127,130,131,139 & 142ರಲ್ಲಿ ಒಟ್ಟು ವಿಸ್ತೀರ್ಣ: 53ಎ–19.8ಗುಂ ಜಮೀನಿನಲ್ಲಿ ಉತ್ತಮ ಗುಣಮಟ್ಟದ ವಸತಿ ನಿವೇಶನ ಮತ್ತು ಮನೆಗಳನ್ನು ಅಭಿವೃದ್ಧಿಪಡಿಸಿ, ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಿ ಸಾರ್ವಜನಿಕರಿಗೆ ಕೈಗೆಟಕುವ ದರದಲ್ಲಿ ಮನೆ/ನಿವೇಶನಗಳನ್ನು ಹಂಚಿಕೆ ಮಾಡುವ ಸಲುವಾಗಿ ಬೇಡಿಕೆ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ.

ಸದರಿ ಯೋಜನೆಯಲ್ಲಿ ಉತ್ತಮವಾದ ರಸ್ತೆ, ಒಳಚರಂಡಿ ವ್ಯವಸ್ಥೆ, ಬೀದಿ ದೀಪ, 24*7 ನೀರು ಸರಬರಾಜು ಹಾಗೂ ಇನ್ನಿತರೆ ಉತ್ತಮ ನಾಗರೀಕ ಸೌಕರ್ಯಕ್ಕಾಗಿ ವಾಣಿಜ್ಯ ನಿವೇಶನಗಳು, ಸಿ.ಎ. ನಿವೇಶನಗಳು ಮತ್ತು ಉದ್ಯಾನವನ ಮುಂತಾದ ಉದ್ದೇಶಗಳಿಗಾಗಿ ನಿವೇಶನಗಳನ್ನು ಮೀಸಲಿರಿಸಿ ವಸತಿ ಯೋಜನೆಯನ್ನು ಕೈಗೊಳ್ಳಲಾಗುತ್ತದೆ. ಈ ಯೋಜನೆಯಲ್ಲಿ ದಾ–ಹ ನಗರಾಭಿವೃದ್ಧಿ ಪ್ರಾಧಿಕಾರದ ನಿಯಮಾವಳಿಗೆ ಅನುಗುಣವಾಗಿ ನಿವೇಶನಗಳನ್ನು ಹೊಂದಲು ಬಯುಸುವ ಆಸಕ್ತ ಸಾರ್ವಜನಿಕರು ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ, ನೋಂದಾಯಿಸಿಕೊಳ್ಳಬಹುದಾಗಿದೆ.

| ಕ್ರಸಂ | ವರ್ಗ | ಸ್ವತ್ತುಗಳ ಅಳತೆ | | ಸ್ವತ್ತುಗಳ ಅಳತೆ | | ನೊಂದಣಿ ಶುಲ್ಕ |
|---|---|---|---|---|---|---|
| | | ಮೀಟರ್‌ಗಳಲ್ಲಿ | ಚದರ ಮೀಟರ್‌ಗಳಲ್ಲಿ | ಅಡಿಗಳಲ್ಲಿ | ಚದರ ಅಡಿಗಳಲ್ಲಿ | ರೂಗಳಲ್ಲಿ |
| 1 | EWS | 6*9 | 54.00 | 20*30 | 580.95 | 300–00 |
| 2 | LIG | 9*12 | 108.00 | 30*40 | 1161.90 | 500–00 |
| 3 | MIG | 9*15 | 137.00 | 30*50 | 1452.38 | 1000–00 |
| 4 | HIG-I | 12*18 | 216.00 | 40*60 | 2323.81 | 1500–00 |
| 5 | HIG-II | 15*24 | 360.00 | 50*80 | 3873.02 | 1500–00 |

**ಅರ್ಜಿಗಳ ನೋಂದಣಿಗೆ ನಿಯಮ ಮತ್ತು ಷರತ್ತುಗಳು:–** (1) ಈ ಅಧಿಕೃತ ಪ್ರಕಟಣೆಯನ್ನು ನಿಖರ ಬೇಡಿಕೆ ಸಮೀಕ್ಷೆಗಾಗಿ ಸಾರ್ವಜನಿಕರ ಹಿತದೃಷ್ಠಿಯಿಂದ ಕರೆಯಲಾಗಿದೆ. (2) ಅರ್ಜಿ ಸಲ್ಲಿಸುವವರು ಅರ್ಜಿ ಶುಲ್ಕ ರೂ.100–00ಗಳನ್ನು ಬ್ಯಾಂಕ್ ಆಫ್ ಬರೋಡಾ, ಪಿ.ಬಿ.ರಸ್ತೆ, ದಾವಣಗೆರೆ ಇವರಲ್ಲಿ ಉಳಿತಾಯ ಖಾತೆ ಸಂಖ್ಯೆ: 89320100005667 (ಫಂಡ್–1)ರ ಶಾಖೆಯಲ್ಲಿ ಪಾವತಿಸತಕ್ಕದ್ದು. (3) ನೋಂದಣಿ ಶುಲ್ಕವನ್ನು ಆಯುಕ್ತರು, ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ಇವರ ಹೆಸರಿನಲ್ಲಿ ಡಿ.ಡಿ. ಪಡೆದು ಅಥವಾ ನಗದಾಗಿ ಭರ್ತಿ ಮಾಡಿದ ಅರ್ಜಿಯೊಂದಿಗೆ ಮೇಲೆ ತಿಳಿಸಿರುವ ಬ್ಯಾಂಕಿನಲ್ಲಿ ನೋಂದಣಿ ಶುಲ್ಕವನ್ನು ಪಾವತಿಸಬಹುದು. (4) ಆಯಾ ಪ್ರವರ್ಗವಾರು ಅಡಿಯಲ್ಲಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸುವವರು (SC, ST, BT, Def, Ex.Ser, cen Govt, St.Govt, Sin Ctzn, Phy.H) ಸಂಬಂಧಿಸಿದ ದೃಢೀಕೃತ ದಾಖಲಾತಿಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು. (5) ನಿವೇಶನಗಳನ್ನು ಪೂರ್ಣ ಬೆಲೆ (Outright sale) ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು. (6) ಅರ್ಜಿ ಸಲ್ಲಿಸುವುದಕ್ಕೆ ಮೊದಲು 10 ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಕಾಲ ಅರ್ಜಿದಾರರು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. (7) ಅರ್ಜಿದಾರರು ನಗರಾಭಿವೃದ್ಧಿ ಪಾಧಿಕಾರ ಅಥವಾ ಇನ್ನಿತರೆ ಯವುದೇ ಸ್ಥಳಿಯ ಸಂಸ್ಥೆ/ಪ್ರಾಧಿಕಾರದಿಂದಾಗಲಿ ಮನೆ/ನಿವೇಶನ ಪಡೆದಿರುವುದಿಲ್ಲವೆಂದು ನೋಟರಿ ಮೂಲಕ ಪ್ರಮಾಣೀಕರಿಸಿದ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. (8) ಆರ್ಥಿಕ ದುರ್ಬಲ ವರ್ಗದ (EWS) ನಿವೇಶನಗಳಿಗೆ ಅರ್ಜಿ ಸಲ್ಲಿಸುವವರು ತಮ್ಮ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದ ಅರ್ಜಿದಾರರು ರೂ.32,000/– ಮತ್ತು ನಗರ ಪ್ರದೇಶದ ಅರ್ಜಿದಾರರ ವಾರ್ಷಿಕ ವರಮಾನ ರೂ.87,600/– ಮೀರದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ತಹಶೀಲ್ದಾರರವರಿಂದ ಪಡೆದು ಅರ್ಜಿಯೊಂದಿಗೆ ಸಲ್ಲಿಸುವುದು. (9) ಮನೆ/ನಿವೇಶನ ಹಂಚಿಕೆಗಾಗಿ ಅರ್ಜಿ ಸಲ್ಲಿಸಿ ನೋಂದಣಿ ಪಡೆದ ಅರ್ಜಿದಾರರಿಗೆ ನೋಂದಣಿ ಶುಲ್ಕವನ್ನು ಮರುಪಾವತಿ ಮಾಡಲಾಗುವುದಿಲ್ಲ. (10) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನ ಹಂಚಿಕೆ) ನಿಯಮಾವಳಿ ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. (11) ಅರ್ಜಿಗಳನ್ನು ನಿಗಧಿತ ನೋಂದಣಿ ಶುಲ್ಕ ಪಾವತಿಯೊಂದಿಗೆ **ದಿನಾಂಕ:11–08–2021 ರಿಂದ 26–08–2021 ರವರೆಗೆ** ಸಲ್ಲಿಸಬಹುದಾಗಿರುತ್ತದೆ. ಅರ್ಜಿದಾರರು ಮುಂದಿನ ಪರಾಮರ್ಶೆಗಾಗಿ ಎಲ್ಲಾ ಪತ್ರ ವ್ಯವಹಾರಗಳ ಪ್ರತಿಯನ್ನು ತಮ್ಮಲ್ಲಿಟ್ಟುಕೊಂಡು ಪತ್ರ ವ್ಯವಹಾರಗಳಲ್ಲಿ ಅರ್ಜಿ ನೊಂದಣಿ ಸಂಖ್ಯೆಯನ್ನು ತಪ್ಪದೇ ನಮೂದಿಸತಕ್ಕದ್ದು. (12) ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ಇವರನ್ನು ಖುದ್ದಾಗಿ ಅಥವಾ ದೂ. ಸಂಖ್ಯೆ: 08192–259394ರಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– **ಆಯುಕ್ತರು, ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.**
ವಾಸಾಇ/ಡಿವಿಜಿ/302/ಎಂಸಿಎ/2021–22
ಸಹಿ/– **ಅಧ್ಯಕ್ಷರು, ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.**

# ಪರಿಸರ ಬದಲಾವಣೆ : ಪ್ರತಿ ದಶಕದಲ್ಲಿ ಬಿಸಿ ಅಲೆ ಎಚ್ಚರಿಕೆ

ಬರ್ಲಿನ್, ಆ. 9 - ಪರಿಸರ ಬದಲಾವಣೆ ಕಾರಣದಿಂದ ಏರುತ್ತಿರುವ ತಾಪಮಾನ ಮುಂದಿನ ದಶಕದಲ್ಲಿ ಈ ಹಿಂದಿನ ಎಚ್ಚರಿಕೆಗಿಂತ ಹೆಚ್ಚಾಗಲಿದೆ ಎಂದು ವಿಶ್ವ ಸಂಸ್ಥೆಯ ಇತ್ತೀಚಿನ ವರದಿ ತಿಳಿಸಿದ್ದು, ಇದು ಮನುಕುಲಕ್ಕೆ ಕಟ್ಟೆಚ್ಚರ ಎಂದು ತಿಳಿಸಿದೆ.

ಮುಂಬರುವ ದಿನಗಳಲ್ಲಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲಿದೆ ಎಂದು ವಿಶ್ವ ಸಂಸ್ಥೆಯ ನ್ಯಾಷನಲ್ ಸೆಂಟರ್ ಫಾರ್ ಅಟ್ಮಾಸ್ಫಿರಿಕ್ ರೀಸರ್ಚ್ ಹಿರಿಯ ವಿಜ್ಞಾನಿ ಹಾಗೂ ವರದಿ ರೂಪಿಸುವುದರಲ್ಲಿ ಭಾಗಿಯಾಗಿದ್ದ ಲಿಂಡಾ ಮಿಯರ್ನ್ಸ್ ಹೇಳಿದ್ದಾರೆ.

ಪರಿಸರ ಬದಲಾವಣೆಯಿಂದ ಯಾವುದೇ ಪ್ರದೇಶವೂ ಸುರಕ್ಷಿತವಾಗಿಲ್ಲ. ಬಚ್ಚಿಟ್ಟುಕೊಳ್ಳಲು ಯಾವ ಸ್ಥಳವೂ ಉಳಿದಿಲ್ಲ ಎಂದವರು ಹೇಳಿದ್ದಾರೆ. ಆದರೆ, ಪರಿಸರ ಬದಲಾವಣೆಯಿಂದ ಸಂಪೂರ್ಣ ವಿನಾಶವಾಗುವ ಸಾಧ್ಯತೆಯನ್ನು ವಿಜ್ಞಾನಿಗಳು ಸ್ವಲ್ಪ ಮಟ್ಟಿಗೆ ತಗ್ಗಿಸಿದ್ದಾರೆ.

ಪರಿಸರ ಬದಲಾವಣೆ ಕುರಿತ ಅಂತರ್ ಸರ್ಕಾರ ಸಮಿತಿ (ಐ.ಪಿ.ಸಿ.ಸಿ.) ಈ ವರದಿಯನ್ನು ರೂಪಿಸಿದೆ. ಈಗಿರುವ ಪರಿಸ್ಥಿತಿಯಲ್ಲಿ 2030ರ ವೇಳೆಗೆ ಜಾಗತಿಕ ತಾಪಮಾನ ಹೆಚ್ಚಳ 1.5 ಡಿಗ್ರಿ ಸೆಲ್ಸಿಯಸ್ ದಾಟಲಿದೆ ಎಂದು ತಿಳಿಸಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ತಾಪಮಾನ ಹೆಚ್ಚಾಗುತ್ತಿರುವುದನ್ನು ಈ ವರದಿಯಲ್ಲಿ ಪರಿಗಣಿಸಲಾಗಿದೆ.

234 ವಿಜ್ಞಾನಿಗಳು 3,000ಕ್ಕೂ ಹೆಚ್ಚು ಪುಟಗಳ ವರದಿಯನ್ನು ರೂಪಿಸಿದ್ದಾರೆ. ಈ ಹಿಂದೆ 50 ವರ್ಷಗಳಿಗೊಮ್ಮೆ ಕಂಡು ಬರುತ್ತಿದ್ದ ಬಿಸಿ ಅಲೆ, ಈಗ ಪ್ರತಿ ದಶಕಕ್ಕೆ ಕಂಡು ಬರಲಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಕೈಗಾರಿಕಾ ದಿನಗಳು ಆರಂಭವಾದ ನಂತರ ತಾಪಮಾನ ಹೆಚ್ಚಾಗುತ್ತಿದ್ದು, ಇದು ಮಾನವ ನಿರ್ಮಿತ ವಿಕೋಪ ಎಂದು ವರದಿಯಲ್ಲಿ ತಿಳಿಸಲಾಗಿದೆ.

# ಸರ್ಕಾರದಿಂದ ವಿದ್ಯಾರ್ಥಿಗಳ ಬದುಕು ನಾಶ

**(3ನೇ ಪುಟದಿಂದ)** ಹಾಕಿದ್ದರಿಂದ ಮಕ್ಕಳು ಆಹಾರ ಕೊರತೆ ಮತ್ತು ಅಪೌಷ್ಠಿಕತೆಯಿಂದ ಬಳಲುವಂತಾಯಿತು. ಇದಕ್ಕೆ ಸರ್ಕಾರದ ನೀತಿಗಳೇ ಕಾರಣ ಎಂದು ಆರೋಪಿದರು.

ಕೊರೊನಾ ಪಿಡುಗಿನ ಹೆಸರಿನಲ್ಲಿ ಜನ ಮುಕ್ತವಾಗಿ ಬೀದಿಗೆ ಬರದೇ ಇರುವ ಸಂದರ್ಭದಲ್ಲಿ ಪಾರ್ಲಿಮೆಂಟಿನ ಸದನಗಳಲ್ಲೂ ಚರ್ಚಿಸದೇ ಜನ ವಿರೋಧಿಯಾದ, ಕಾರ್ಪೋರೇಟ್ ಕಂಪನಿಗಳ ಪರವಾದ ಕಾನೂನು ನೀತಿಗಳನ್ನು ಜಾರಿಗೊಳಿಸಲಾಗಿದೆ. ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಕೇಂದ್ರದ ಪ್ರಧಾನಿ ನರೇಂದ್ರ ಮೋದಿ ಅವರು 'ಶ್ವೇತ ಪತ್ರ' ಹೊರಡಿಸಬೇಕು ಎಂದು ಒತ್ತಾಯಿಸಿದರು.

ಕೊರೊನಾ ನಿಯಂತ್ರಿಸುವಲ್ಲಿ ಸಂಪೂರ್ಣ ವಿಫಲವಾಗಿದ್ದು ಪೆಟ್ರೋಲ್, ಡೀಸೆಲ್, ಗ್ಯಾಸ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆಯೇರಿಕೆ ಮಾಡಿ, ಜನರನ್ನು ಸಂಕಷ್ಟಕ್ಕೀಡು ಮಾಡಲಾಗಿದೆ. ಕೃಷಿ, ಶಿಕ್ಷಣ, ವಿದ್ಯುತ್ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಕಾರ್ಪೋರೇಟ್ ಕಂಪನಿಗಳೇ ಒಕ್ಕಲುತನ ಮಾಡುತ್ತಿವೆ. ದೇಶದ ಸಂಪತ್ತಿನ ಸಾಮಾಜೀಕರಣ ಕ್ರಿಯೆ ನಡೆಯುತ್ತಿದೆ ಎಂದರು.

ಒಕ್ಕೂಟ ವ್ಯವಸ್ಥೆಯನ್ನು ಹಾಳು ಮಾಡುವ ಜೊತೆಗೆ ಭಾರತದ ಬಹುಸಂಸ್ಕೃತಿಯನ್ನು ನಾಶ ಮಾಡುವ ಪಿತೂರಿ ಕೂಡ ನಡೆಯುತ್ತಿದೆ. ತ್ಯಾಗ, ಬಲಿದಾನಗಳಿಂದ ಪಡೆದ 1947 ರ ಸ್ವಾತಂತ್ರ್ಯ ಅಪಾಯದಲ್ಲಿದೆ. ಪ್ರಭುತ್ವಗಳ, ಕಾರ್ಪೋರೇಟ್ ಕಂಪನಿಗಳ, ಸಿರಿವಂತರ ಪರವಾದ ನೀತಿಗಳಿಂದ ದೇಶದ ಧನಿಕರು ಬಹುಕೋಟ್ಯಾಧಿಪತಿಗಳಾಗುತ್ತಿದ್ದಾರೆ. ಬಡವರು ಕಡು ಬಡವರಾಗುತ್ತಿದ್ದಾರೆ ಎಂದು ಹೇಳಿದರು.

> **ಧರ್ಮದಲ್ಲಿ ರಾಜಕಾರಣ ಸಲ್ಲದು**
>
> ಕಾಯಕ-ದಾಸೋಹ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕಾದ, ಜನರ ನೋವು, ಸಂಕಟಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಬೇಕಿದ್ದ ಮಠಗಳು ರಾಜಕಾರಣದತ್ತ ಮುಖ ಮಾಡಿವೆ. ಆರ್‌ಎಸ್‌ಎಸ್ ಜನಿವಾರಕ್ಕೆ ಲಿಂಗ ಕಟ್ಟುವ ಮೂರ್ಖ ಮಠಗಳಾಗಿವೆ. ಧರ್ಮದ ಹೆಸರಿನಲ್ಲಿ ರಾಜಕಾರಣಕ್ಕೆ ಮುಂದಾಗಿರುವುದು ವಿಷಾದದ ಸಂಗತಿ ಎಂದು ಹೇಳಿದರು.

ಭ್ರಷ್ಟರ, ದುಷ್ಟರ ಅಟ್ಟಹಾಸಕ್ಕಿಂತ, ಸಭ್ಯರ, ಪ್ರಾಮಾಣಿಕರ ಮೌನ ಅಪಾಯಕಾರಿ. ಭಾರತದ ಇಂದಿನ ಜನವಿರೋಧಿ, ಜೀವ ವಿರೋಧಿ ಪ್ರಭುತ್ವಗಳ ವಿರುದ್ಧ ಧ್ವನಿ ಎತ್ತಬೇಕಾಗಿದೆ ಎಂದರು.

ಮೋದಿ ಅವರು ಚುನಾವಣೆ ಸಂದರ್ಭದಲ್ಲಿ ಕೊಟ್ಟ 2 ಕೋಟಿ ಉದ್ಯೋಗ ಸೃಷ್ಟಿಯ ಭರವಸೆ ಹುಸಿಯಾಗಿ ನಿರುದ್ಯೋಗ ಸೃಷ್ಟಿಯಾಗಿದೆ. ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಬದಲಿಗೆ 'ಸಬ್ ಕಾ ಸಾಥ್, ಸಬ್ ಕಾ ವಿನಾಶ್' ಆಗುತ್ತಿದೆ ಎಂದು ವ್ಯಂಗ್ಯವಾಡಿದರು.

ಎಐಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆವರಗೆರೆ ಹೆಚ್.ಜಿ. ಉಮೇಶ್ ಮಾತನಾಡಿ, ದೇಶದಲ್ಲಿ ಬ್ಯಾಂಕಿಂಗ್, ರೈಲ್ವೆ, ವಿಮೆ ಸೇರಿದಂತೆ ಹಲವಾರು ಸೇವಾ ವಲಯಗಳನ್ನು ಖಾಸಗೀಕರಣ ಮಾಡಲಾಗುತ್ತಿದೆ. ಬಂಡವಾಳ ಶಾಹಿಗಳ ಹಿಡಿತದಲ್ಲಿ ಆಡಳಿತವಿದೆ. ಜನರನ್ನು ಜಾಗೃತಿಗೊಳಿಸಲು ಸಿಪಿಐ ಜನಾಂದೋಲನ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದರು.

ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ಮಾತನಾಡಿದರು. ಖಜಾಂಚಿ ಆನಂದರಾಜ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಮಿಕ ಮುಖಂಡರಾದ ಆವರಗೆರೆ ವಾಸು, ಎಂ.ಬಿ. ಶಾರದಮ್ಮ, ಟಿ.ಎಸ್. ನಾಗರಾಜ್, ಮಹಮದ್ ಬಾಷಾ ಜಗಳೂರು, ಮಹಮದ್ ರಫೀಕ್ ಚನ್ನಗಿರಿ, ಹೆಚ್.ಕೆ. ಕೊಟ್ರಪ್ಪ, ಪಾಲವ್ವನಹಳ್ಳಿ ಪ್ರಸನ್ನಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಇಪ್ಟಾ ಕಲಾವಿದರಾದ ಐರಣಿ ಚಂದ್ರು, ಪಿ. ಷಣ್ಮುಖಸ್ವಾಮಿ, ವಸಂತಕುಮಾರ್ ಜಾಗೃತಿ ಗೀತೆಗಳನ್ನಾಡಿದರು.

# ಕಾರ್ಮಿಕ ಕಿಟ್ ವಿತರಣೆಯಲ್ಲಿ ಅವ್ಯವಹಾರ



## ರಾಣೇಬೆನ್ನೂರಿನಲ್ಲಿ ಕಾಂಗ್ರೆಸ್ ಪ್ರತಿಭಟನೆ

ರಾಣೇಬೆನ್ನೂರು, ಆ.9- ಕಾರ್ಮಿಕರಿಗೆ ಸರ್ಕಾರ ಕೊಡುವ ದಿನಸಿ ಕಿಟ್ ಗಳನ್ನು ಶಾಸಕ ಅರುಣಕುಮಾರ ಪೂಜಾರ ಅವರು, ಅಧಿಕಾರಿಗಳಿಗೆ ಹೇಳಿ ಬಿಜೆಪಿ ಮುಖಂಡರ ಮೂಲಕ ತಮ್ಮ ಕಾರ್ಯಕರ್ತರಿಗೆ ವಿತರಿಸಿದ್ದು, ಈ ಬಗ್ಗೆ ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರ ಮೇಲೆ ಯೋಗ್ಯ ಕ್ರಮ ಕೈಗೊಳ್ಳಬೇಕೆಂದು ಕಾಂಗ್ರೆಸ್‌ನಿಂದ ತಹಶೀಲ್ದಾರ್ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕೋಳಿವಾಡ ಮಾತನಾಡಿ, ಕೋವಿಡ್ ಸಂಕಷ್ಟಕ್ಕೆ ಸಿಲುಕಿದ ಬಡ ಕಾರ್ಮಿಕರ ಅನ್ನವನ್ನು ಕಸಿದುಕೊಂಡು ರಾಜಕಾರಣ ಮಾಡುತ್ತಿರುವ ಬಿಜೆಪಿ ಪಕ್ಷದ ಹಾಗೂ ಶಾಸಕರ ನಡೆ ಕ್ಷಮಿಸಲಾರದಂತಹದ್ದು, ರಾಜ್ಯಪಾಲರು ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲಿದ್ದಾರೆ ಎಂದರು.

ಪ್ರತಿಭಟನಾಕಾರರಿಂದ ಮನವಿ ಪತ್ರ ಸ್ವೀಕರಿಸಿದ ತಹಶೀಲ್ದಾರ್ ಎಸ್.ಜಿ. ಶಂಕರ್ ಮಾತನಾಡಿ, ಕಿಟ್ ವಿತರಣೆಯಲ್ಲಿ ಅವ್ಯವಹಾರ ನಡೆದಿದ್ದು ಕಂಡುಬಂದರೆ, ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಶ್ರೀ ಸಿದ್ದೇಶ್ವರ ದೇವಸ್ಥಾನದ ಎದುರು ಕಾಂಗ್ರೆಸ್ ಪಕ್ಷ ಹಾಗೂ ಕಾಂಗ್ರೆಸ್ ಕಾರ್ಮಿಕ ಸಂಘಟನೆ ನಡೆಸಿದ ಈ ಪ್ರತಿಭಟನೆಯಲ್ಲಿ ಎಪಿಎಂಸಿ ಅಧ್ಯಕ್ಷ ಬಸವರಾಜ ಸವಣೂರ, ನಗರಸಭೆ ಸದಸ್ಯ ಲಿಂಗರಾಜ ಕೋಡಿಹಳ್ಳಿ, ಇರ್ಷಾದ್, ಏಕನಾಥ ಭಾನುವಳ್ಳಿ, ಬಸವರಾಜ ಹುಚ್ಚಗೊಂಡರ, ಪ್ರಕಾಶ ಜೈನ್, ಪುಟ್ಟಪ್ಪ ಮರಿಯಮ್ಮನವರ, ರವೀಂದ್ರಗೌಡ ಪಾಟೀಲ, ರಾಮಪ್ಪ ನಾಯಕ, ಬಸವರಾಜ ಕೊಂಗಿ ಮತ್ತಿತರರಿದ್ದರು.

**ಕಾರ್ಮಿಕ ಅಧಿಕಾರಿ ಸ್ಪಷ್ಟನೆ:** ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಕಾರ್ಮಿಕ ಕಲ್ಯಾಣಾಧಿಕಾರಿ ಬಾಲಾಜಿ ಮಾತನಾಡಿ, ನೋಂದಾಯಿತ ಕಾರ್ಮಿಕರು 30 ಸಾವಿರ ಇದ್ದು, ಸರ್ಕಾರ 8 ಸಾವಿರ ಕಿಟ್ ಕಳಿಸಿದೆ. ಮತ್ತೆ ಕೊಡುವುದಾಗಿ ಹೇಳಲಾಗಿದ್ದು ಬಂದ ತಕ್ಷಣ ವಿತರಿಸಲಾಗುತ್ತದೆ. ಈಗ ಬಂದಿರುವ ಕಿಟ್ ವಿತರಣೆಯಲ್ಲಿ ಯಾವುದೇ ರೀತಿಯಲ್ಲಿ ಅವ್ಯವಹಾರ ನಡೆದಿಲ್ಲ. ಕಾನೂನಾತ್ಮಕವಾಗಿ ನಡೆದಿದೆ ಎಂದು ಸ್ಪಷ್ಟನೆ ನೀಡಿದರು.

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್, ಸೇಲ್ಸ್ ಮನ್ ಮತ್ತು ಅಂಗಡಿ ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ
79752 83579

**ಮನೆ ಲೀಸ್‌ಗೆ**
ನೆಲ ಮಹಡಿ ಹಾಗೂ 3ನೇ ಮಹಡಿ 2 ಬೆಡ್‌ರೂಂ ಹಾಗೂ 1ನೇ ಮಹಡಿಯಲ್ಲಿ 3 ಬೆಡ್‌ರೂಂ ಸುಸಜ್ಜಿತ ಮನೆ ಹದಡಿ ರಸ್ತೆ ಪ್ರಗತಿ ಕಾಂಕ್ರೀಟ್ ಪಕ್ಕ, ಶ್ರೀನಿವಾಸ ನಗರ 4ನೇ ಕ್ರಾಸ್, ತರಳಬಾಳು ಶಾಲೆ ಎದುರು ಲೀಸ್‌ಗಿವೆ. ಸಂಪರ್ಕಿಸಿ
99723 42941

## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ಪ್ರಕಟ ಪಡಿಸುವುದೇನೆಂದರೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ವಿವರಿಸಿದ ಸೊತ್ತು ಮಾರಾಟಕ್ಕೆ ಇರುತ್ತದೆ. ಸದರಿ ಷೆಡ್ಯೂಲ್ ಸ್ವತ್ತು ಈ ಹಿಂದೆ ದಿನಾಂಕ 12.02.1962ರಲ್ಲಿ ದಾವಣಗೆರೆ ವಾಸಿಯಾದ **ಪವಾಡಪ್ಪ ದೊಡ್ಡ ಸಿದ್ದಪ್ಪ**, ಸಹೋದರ **ಪವಾಡಪ್ಪ ಸಿದ್ದಪ್ಪ** ಇವರುಗಳು ಪಾಲು ವಿಭಾಗ ಮಾಡಿಕೊಂಡಿದ್ದು, ಪವಾಡಪ್ಪ ದೊಡ್ಡ ಸಿದ್ದಪ್ಪನವರ ಹಿಸ್ಸೆಗೆ ಬಂದಿದ್ದು ಅವರ ಮಕ್ಕಳಾದ **1ನೇ ಪಿ.ಎಸ್. ಹನುಮಂತಪ್ಪ, 2ನೇ ಪಿ. ಎಸ್. ನಾಗರಾಜಪ್ಪ, 3ನೇ ಪಿ.ಎಸ್ ನಾಗೇಂದ್ರಪ್ಪ** ಇವರುಗಳು 9.11.2010ರಲ್ಲಿ ಎಂ. **ವೀರಭದ್ರಪ್ಪ ಬಿನ್ ಲೇಟ್ ಮುದೇಗೌಡ್ರು ಮುದೇಗೌಡಪ್ಪ** ಇವರಿಗೆ ಮಾರಾಟ ಮಾಡಿದ್ದು, ನಂತರ ಎಂ. ವೀರಭದ್ರಪ್ಪ ಇವರು ದಿನಾಂಕ 09.06.2017 ರಂದು **ಎಸ್.ಎಸ್. ಮಠಪತಿ ಬಿನ್ ಸಿದ್ದರಾಮಯ್ಯ** ಇವರಿಗೆ ಶುದ್ಧ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ನಂತರ **ಎಸ್.ಎಸ್ ಮಠಪತಿ ಬಿನ್ ಸಿದ್ದರಾಮಯ್ಯ** ಇವರು 19.07.2017 ರಂದು ತಮ್ಮ ಹೆಂಡತಿಯಾದ **ಶ್ರೀಮತಿ ವಾಣಿ ಎಂ.ಇ ಕೋಂ ಎಸ್.ಎಸ್. ಮಠಪತಿ** ಇವರಿಗೆ ದಾನ ಪತ್ರದ ಮೂಲಕ ಷೆಡ್ಯೂಲ್ ಸ್ವತ್ತಿನಲ್ಲಿ ದಕ್ಷಿಣ ಭಾಗದ ಕಡೆಗೆ 12.05 ಗುಂಟೆ ಭೂಪರಿವರ್ತನಾ ಪ್ರದೇಶವು ದಾನಕ್ಕೆ ಒಳಪಟ್ಟಿರುತ್ತದೆ. ಈ ಕೆಳಗೆ ವಿವರಿಸಿದ ಷೆಡ್ಯೂಲ್ ಪೂರಾ ಸ್ವತ್ತು ಮಾರಾಟಕ್ಕೆ ಇರುತ್ತದೆ. ಆದ ಪ್ರಯುಕ್ತ ಯಾರಾದರೂ ಬೇರೆ ವಾರಸುದಾರರು ಇದ್ದರೆ ಮತ್ತು ಯಾವುದೇ ಬ್ಯಾಂಕ್‌ನಲ್ಲಿ ಸಾಲ, ಅಡಮಾನ ಮುಂತಾದ ಋಣ ಭಾರಗಳಿಗೆ ಒಳಗಾಗಿದ್ದರೆ ಈ ಪ್ರಕಟಣೆ ದಿನಾಂಕ ದಿಂದ 7 ದಿನಗಳ ಒಳಗಾಗಿ ಕೆಳಕಂಡ ವಿಳಾಸಕ್ಕೆ ತಮ್ಮ ತಕಾರರು ಇದ್ದಲ್ಲಿ ಸಲ್ಲಿಸತಕ್ಕದ್ದು. 7 ದಿವಸದೊಳಗಾಗಿ ಯಾವುದೇ ತಕಾರರು ಬಾರದಿದ್ದಲ್ಲಿ ಸದರಿ ಸ್ವತ್ತಿನ ಮೇಲೆ ಯಾವುದೇ ರೀತಿಯ ಬ್ಯಾಂಕ್, ಕೋರ್ಟ್ ಅಡಮಾನ, ಸಾಲಗಳು ಇರುವುದಿಲ್ಲ ಎಂದು ಪರಿಗಣಿಸಿ ಮತ್ತು ಬೇರೆ ಯಾರೂ ವಾರಸುದಾರರು ಇಲ್ಲ ಎಂದು ತಿಳಿದು ಸದರಿ ಷೆಡ್ಯೂಲ್ ಸ್ವತ್ತನ್ನು ಈಗಿನ ಮಾರುಕಟ್ಟೆ ಬೆಲೆಗೆ ಮಾರಾಟ ಮಾಡುವವರಿದ್ದಾರೆ ತಿಳಿಯಿರಿ.

**ಷೆಡ್ಯೂಲ್**

ದಾವಣಗೆರೆ ಉಪನೋಂದಣಾಧಿಕಾರಿಗಳ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ನಿಟ್ಟುವಳ್ಳಿ ಗ್ರಾಮದ ರಿ.ಸ.ನಂ 131/15 ವಿಸ್ತೀರ್ಣ 25 ಗುಂಟೆವುಳ್ಳ ಜಮೀನು ದಾವಣಗೆರೆ ಜಿಲ್ಲಾಧಿಕಾರಿಗಳವರಿಂದ ಅಧಿಕೃತ ಜ್ಞಾಪನಾ ಪತ್ರ, ಸಂ. **ಎಎಲ್‌ಎನ್/ಸಕಾಲ/ ಸಿ.ಆರ್/302/2016-17/ ನಂ.ಎಎಲ್‌ಎನ್/ಸಕಾಲ/ಎಸ್.ಆರ್/355/2016-17** ದಿನಾಂಕ 30.6.2016 ರ ಪ್ರಕಾರ ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆ ಆಗಿದ್ದು ಯಾವುದೇ ಅಭಿವೃದ್ಧಿ ಹೊಂದಿರುವುದಿಲ್ಲ. ಸದರಿ ಸೊತ್ತಿನ ದಕ್ಷಿಣ ಭಾಗದ ಕಡೆ ಗುಂಟೆ 12.05 ಉಳ್ಳ ಜಮೀನು ದಿನಾಂಕ 19.07.2017ರ ದಾನ ಪತ್ರಕ್ಕೆ ಒಳಪಟ್ಟಿರುತ್ತದೆ. ಸದರಿ 131/15 ಪೂರಾ ಸ್ವತ್ತಿಗೆ ಚಕ್ಕು ಬಂದಿ: **ಪೂರ್ವಕ್ಕೆ:** ರಿ.ಸ.ನಂ 131/16 ಎಂ.ವಿ ರವಿ ಇವರ ಸ್ವತ್ತು, **ಪಶ್ಚಿಮಕ್ಕೆ:** ಇದೆ ಸ.ನಂ ನಲ್ಲಿ ಉಳಿದ ಸ್ವತ್ತು 131/8, **ಉತ್ತರಕ್ಕೆ:** ಆರ್. ರಾಮಶೆಟ್ರು ಇವರ ಜಮೀನು ಸ.ನಂ. 130, **ದಕ್ಷಿಣಕ್ಕೆ:** ಶ್ರೀಮತಿ ಗೌರಮ್ಮ ಕೋಂ ಪಿ. ಸಣ್ಣ ಸಿದ್ದಪ್ಪ ಇವರ ಜಮೀನು.

ಮೇಲ್ಕಂಡ ಪೂರಾ ಸ್ವತ್ತು ಮಾರಾಟಕ್ಕೆ ಇರುತ್ತದೆ. ಆದ ಪ್ರಯುಕ್ತ ಸಾರ್ವಜನಿಕ ಪ್ರಕಟಣೆ ಹೊರಡಿಸಿ ಮೂಲ ಅಥವಾ ವಂಶ ಪಾರಂಪರ್ಯ ತಕರಾರುಗಳು ಮತ್ತು ಅಡಮಾನಗಳು ಇದ್ದರೆ ತಕರಾರು ಸಲ್ಲಿಸತಕ್ಕದ್ದು

**ಶಿಲ್ಪಿ W/o ಆರ್. ವಿ. ಕುಮಾರ್**
**ಬಿನ್ ರಾಮಲಿಂಗಯ್ಯ**
ಡಿಸಿಎಂ ಬಡಾವಣೆ, ದಾವಣಗೆರೆ.
**ಮೊ: 99454 22553**
**77601 55550**

**ಶರಣಪ್ಪ ಸಿ.,** ವಕೀಲರು
ನಂ.264/2 4ನೇ ಮೇನ್,
ಪಿ.ಜೆ. ಬಡಾವಣೆ, ದಾವಣಗೆರೆ.
**ಮೊ: 98458 02855**

# ರಾಜ್ಯದ ನೀರು ಪೂರ್ಣ ಬಳಕೆ

**(3ನೇ ಪುಟದಿಂದ)** ಸೌಲಭ್ಯ ಒದಗಿಸಲಾಗಿದೆ. ಪ್ರಸಕ್ತ ಆಯವ್ಯಯದಲ್ಲಿ 18,702 ಕೋಟಿ ಅನುದಾನವನ್ನು ಮೀಸಲಿಡಲಾಗಿದ್ದು, ಜುಲೈ ಅಂತ್ಯಕ್ಕೆ 5,053 ಕೋಟಿ ರೂ. ಆರ್ಥಿಕ ಪ್ರಗತಿ ಸಾಧಿಸಲಾಗಿದೆ. ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಭೂ ಸ್ವಾಧೀನ ಪ್ರಕ್ರಿಯೆ ಪ್ರಮುಖವಾಗಿರುವುದರಿಂದ ಭೂ ಸ್ವಾಧೀನಕ್ಕೆ ಆದ್ಯತೆ ನೀಡಿ, ಕಾರ್ಯನಿರ್ವಹಿಸಬೇಕು ಎಂದು ಅವರು ತಿಳಿಸಿದರು.

ಸರ್ಕಾರಕ್ಕೆ ಹೆಚ್ಚಿನ ಹೊರೆಯಾಗದಂತೆ ನೀರಿನ ಸದ್ಬಳಕೆಯಾಗುವ ಹಾಗೂ ರೈತರಿಗೆ ಅನುಕೂಲವಾಗುವಂತಹ ಯೋಜನೆಗಳನ್ನು ರೂಪಿಸಬೇಕು. ಕೆರೆಗೆ ನೀರು ತುಂಬುವ ಯೋಜನೆ, ರೈತರ ಜಮೀನಿನಲ್ಲಿ ಕೃಷಿ ಹೊಂಡ ನಿರ್ಮಾಣ ಯೋಜನೆಗಳು ಉತ್ತಮವಾಗಿದ್ದು, ಇದರಿಂದ ಅಂತರ್ಜಲ ವೃದ್ಧಿಯಾಗುತ್ತದೆ. ಸವಳು, ಜವಳು ಸಮಸ್ಯೆ ಉದ್ಭವವಾಗುವುದಿಲ್ಲ ಎಂದು ಹೇಳಿದರು.

ಇದಕ್ಕೆ ನಿರ್ವಹಣಾ ವೆಚ್ಚವೂ ಇರುವುದಿಲ್ಲ. ಕೃಷಿ ಹೊಂಡಗಳ ಒಳಭಾಗದಲ್ಲಿ ಉತ್ತಮ ಗುಣಮಟ್ಟದ ಶೀಟ್ ಅಳವಡಿಸಬೇಕು. ಇದರಿಂದ ನೀರು ಶೇಖರಣೆಗೆ ಅನುಕೂಲವಾಗುವುದರ ಜೊತೆಗೆ ಕೃಷಿ ಹೊಂಡಗಳಲ್ಲಿ ನೀರು ಇಂಗದೇ ಸದುಪಯೋಗವಾಗುತ್ತದೆ. ಕಾಮಗಾರಿಗಳನ್ನು ಉತ್ತಮ ಗುಣಮಟ್ಟದಲ್ಲಿ ಪೂರ್ಣಗೊಳಿಸಬೇಕು ಎಂದು ಜಲಸಂಪನ್ಮೂಲ ಸಚಿವರು ಸೂಚಿಸಿದರು.

# ಜಿಲ್ಲೆಯಲ್ಲಿ ವಿದ್ಯಾರ್ಥಿಗಳು ಪಾಸ್

**(3ನೇ ಪುಟದಿಂದ)** ಉತ್ತೀರ್ಣರಾಗಿರುವುದು ಗಮನಾರ್ಹ.

ಸರ್ಕಾರಿ ಶಾಲೆಯ ಶಾಲೆಯ 2909, ಅನುದಾನಿತ ಶಾಲೆಯ 2519 ಹಾಗೂ ಅನುದಾನ ರಹಿತ ಶಾಲೆಯ 1923 ವಿದ್ಯಾರ್ಥಿಗಳು ಎ ದರ್ಜೆಯಲ್ಲಿ ಹಾಗೂ ಜಿಲ್ಲೆಯ ಸರ್ಕಾರಿ ಶಾಲೆಯ 3057, ಅನುದಾನಿತ ಶಾಲೆಯ 2471 ಹಾಗೂ ಅನುದಾನ ರಹಿತ 2798 ವಿದ್ಯಾರ್ಥಿಗಳು ಬಿ ದರ್ಜೆ ಮತ್ತು ಸರ್ಕಾರಿ ಶಾಲೆಯ 878, ಅನುದಾನಿತ ಶಾಲೆಯ 552 ಹಾಗೂ ಅನುದಾನ ರಹಿತ 615 ವಿದ್ಯಾರ್ಥಿಗಳು ಸಿ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಚನ್ನಗಿರಿ ತಾಲ್ಲೂಕಿನಲ್ಲಿ 3763, ದಾವಣಗೆರೆ ಉತ್ತರ ವಲಯದಲ್ಲಿ 3541, ದಕ್ಷಿಣ ವಲಯದಲ್ಲಿ 6073, ಹರಿಹರ 3077, ಹೊನ್ನಾಳಿ 2991 ಹಾಗೂ ಜಗಳೂರು ತಾಲ್ಲೂಕಿನಲ್ಲಿ 2275 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಎಲ್ಲರೂ ತೇರ್ಗಡೆಯಾಗಿದ್ದಾರೆ.

ಜಿಲ್ಲೆಯಲ್ಲಿ 423 ಶಾಲೆಗಳು ಎ ಗ್ರೇಡ್ ಹಾಗೂ 21 ಶಾಲೆಗಳು ಬಿ ಗ್ರೇಡ್ ಪಡೆದವೆ. ಚನ್ನಗಿರಿ ತಾಲ್ಲೂಕಿನಲ್ಲಿ 76, ದಾವಣಗೆರೆ ಉತ್ತರ ವಲಯ 69, ದಕ್ಷಿಣ ವಲಯದಲ್ಲಿ 117, ಹರಿಹರ 61, ಹೊನ್ನಾಳಿ 52 ಹಾಗೂ ಜಗಳೂರು ತಾಲ್ಲೂಕಿನಲ್ಲಿ 48 ಶಾಲೆಗಳು ಎ ಗ್ರೇಡ್ ಪಡೆದಿವೆ. ದಾವಣಗೆರೆ ಉತ್ತರದಲ್ಲಿ 6, ದಕ್ಷಿಣ ವಿಭಾಗದಲ್ಲಿ 8, ಹೊನ್ನಾಳಿ ತಾಲ್ಲೂಕಿನಲ್ಲಿ 7 ಶಾಲೆಗಳು ಬಿ ಗ್ರೇಡ್ ಪಡೆದಿವೆ.

## ಮಂಗಳಗೌರಿಗೆ ಪ್ರಾರ್ಥನೆ

ಮಂಗಳಗೌರಿಯೆ ಬಾರಮ್ಮ
ಮಂಗಳವಾರವು ಇಂದಮ್ಮ
ಮಾಂಗಲ್ಯ ಭಾಗ್ಯ ನೀಡಮ್ಮ
ಮಂಗಳಾಂಗಿಯರ ಸಲಹಮ್ಮ

ಹರನ ಅರ್ಧಾಂಗಿ ಈಶ್ವರಿಯೇ
ಕರವ ಮುಗಿವೆನು ಶಂಕರಿಯೇ
ವರವ ಬೇಡುವೆ ಕೌಮಾರಿಯೇ
ಶಿರವ ಬಾಗುವೆನು ಶುಭಕರಿಯೇ

ಚೆಂದದ ಮಂಟಪಕೆ ಬಾರಮ್ಮ
ಅರ್ಘ್ಯ ಪಾದ್ಯ ನೀಡುವೆನಮ್ಮ
ಮಂಗಳ ದ್ರವ್ಯ ಪೂಜಿಪೆನಮ್ಮ
ಸುಂದರ ಹೂ ಪತ್ರ ನಿನಗಮ್ಮ

ಧೂಪ ದೀಪ ನೈವೇದ್ಯ ನೀಡುವೆ
ಕೋಪ ತಾಪ ಬಿಡಿಸು ಬೇಡುವೆ
ಪಾಪ ರಾಶಿಯ ಸುಡಮ್ಮ ಎರಗುವೆ
ಕಾಪಾಡು ಎಂದು ಸೆರಗೊಡ್ಡುವೆ

ಹದಿನಾರು ತಂಬಿಟ್ಟಿನ ಶ್ರೇಷ್ಠ ಆರತಿ
ಮುದದಿ ಬೆಳಗುವೆ ನಿಮಗೆ ಪಾರ್ವತಿ
ಹೃದಯದಿ ನಿಲ್ಲಮ್ಮ ಧನ್ಯ ಶಿವಸತಿ
ಸದನಕೆ ಶಾಂತಿಯ ನೀಡುವ ಒಡತಿ

ಶ್ರಾವಣ ಮಾಸದಿ ಬರುವವಳೆ
ಸುವರ್ಣ ಸಂಪತ್ತು ಕೊಡುವವಳೆ
ಕವಿದ ಅಜ್ಞಾನ ಕಳೆವವಳೆ
ನವ ಉಲ್ಲಾಸ ನೀಡುವವಳೆ

ವ್ರತವ ನಿಷ್ಠೆಯಲಿ ಮಾಡಿಸಮ್ಮ
ಸತತ ಭಕ್ತಿಯಲಿ ನಡೆಸಮ್ಮ
ಆತಂಕ ಭಯಗಳ ಕಳೆಯಮ್ಮ
ಅತೃಪ್ತಿ ಆಲಸ್ಯ ಓಡಿಸಮ್ಮ

ಸತ್ಕಾರ್ಯ ಮಾಡೊ ಇಚ್ಛೆಯು ನೀನೆ
ಅದಕಾಗಿ ಬರುವ ಜ್ಞಾನವು ನೀನೆ
ಮಾತೆ ಕ್ರಿಯೆ ಮಾಡುವಿ ನೀನೆ
ದಾತೆ ಸಿರಿ ಹರಿ ಸಹೋದರಿ ನೀನೆ
ಶ್ರೀ ಕೃಷ್ಣಾರ್ಪಣಮಸ್ತು

**- ರೂಪಶ್ರೀ ಶಶಿಕಾಂತ್**

## ಚಿನ್ನದ ಕುವರನಿಗೆ ಅಭಿನಂದನೆ




ಭಾರತ ದೇಶದ ಹೆಮ್ಮೆಯ ಪುತ್ರನೆ
ನಿನಗಿದೊ ನಮ್ಮೆಯ ವಂದನೆ
ಚಿನ್ನದ ಪದಕವ ಗೆದ್ದಿಹ ಧೀರನೆ
ನಮ್ಮೆಲ್ಲರ ಅಭಿನಂದನೆ.

ವಿದೇಶದಲ್ಲಿ ನಮ್ಮೆಯ ದೇಶದ
ವಿಜಯ ಪತಾಕೆಯ ಹಾರಿಸಿದೆ
ಎಲ್ಲರ ಕನಸನು ನನಸಾಗಿಸಿ ನೀ
ದೇಶದ ಗೌರವ ಹೆಚ್ಚಿಸಿದೆ.

ಗುರಿಯನು ತಪ್ಪದೆ ಭಲ್ಲೆಯ ಎಸೆದು
ಬಂಗಾರದ ಬಿಲ್ಲೆಯ ಪಡೆದೆ
ಭಾರತೀಯರ ಹರಕೆಯು ಫಲಿಸಿ
ನೀನೆಲ್ಲರ ಮನೆ ಮಾತಾದೆ.

ಚಿನ್ನವ ಗೆದ್ದು ವಿದೇಶದಲ್ಲಿ
ರಾಷ್ಟ್ರಗೀತೆಯನು ಮೊಳಗಿಸಿದೆ
ಭಾರತಾಂಬೆಗೆ ಕಿರೀಟ ತೊಡಿಸಿದ
ಹೆಮ್ಮೆಯ ಕುವರನು ನೀನಾದೆ.

ಹದಿಮೂರು ವರ್ಷದ ನಂತರದಲ್ಲಿ
ಹೊಸ ದಾಖಲೆಯನು ನೀ ಬರೆದೆ
ಜನಮಾನಸದಲಿ ರಾರಾಜಿಸುತ
ಬಂಗಾರದ ಯುಗ ಸೃಷ್ಟಿಸಿದೆ.

ಹರಡಲಿ ಎಲ್ಲೆಡೆ ನಿನ್ನಯ ಕೀರ್ತಿ
ಬೆಳಗಲಿ ನಮ್ಮಯ ದೇಶದ ಖ್ಯಾತಿ
ಹೀಗೆಯೆ ಸಾಗಲಿ ನಿನ್ನಿ ಪಯಣ
ಸಾರ್ಥಕವಾಗಲಿ ನಿನ್ನಯ ಜೀವನ.

**- ಜಿ.ಎಸ್.ಗಾಯತ್ರಿ, ಶಿಕ್ಷಕಿ**
**ಬಾಪೂಜಿ ಶಾಲೆ, ಹರಿಹರ.**

# ವಿದ್ಯಾರ್ಥಿಗಳಿಗೆ 625

**(3ನೇ ಪುಟದಿಂದ)** ಶ್ರೇಣಿಯಲ್ಲಿ 2,50,317 (ಶೇ.32)ವಿದ್ಯಾರ್ಥಿಗಳು, ಬಿ ಶ್ರೇಣಿಯಲ್ಲಿ 2,87,684 (ಶೇ.36.86) ವಿದ್ಯಾರ್ಥಿಗಳು, ಸಿ ಶ್ರೇಣಿಯಲ್ಲಿ 1,13,610 (ಶೇ.14.55) ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಶೇ.9 ರಷ್ಟು ವಿದ್ಯಾರ್ಥಿಗಳನ್ನು ಗ್ರೇಸ್ ಮಾರ್ಕ್ಸ್ ನೀಡಿ ಪಾಸ್ ಮಾಡಲಾಗಿದ್ದರೆ, 13 ವಿದ್ಯಾರ್ಥಿಗಳಿಗೆ ಗರಿಷ್ಠ 28 ರಷ್ಟು ಗ್ರೇಸ್ ಮಾರ್ಕ್ಸ್ ನೀಡಿ ತೇರ್ಗಡೆ ಮಾಡಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲೆಗಳು ಎ ಫಲಿತಾಂಶವನ್ನು ಇದೇ ಮೊದಲ ಬಾರಿಗೆ ಪಡೆದುಕೊಂಡಿವೆ ಎಂದವರು ತಿಳಿಸಿದರು.

## ತಾಪಮಾನ ಏರಿಕೆಯ ಎಚ್ಚರಿಕೆ

**(3ನೇ ಪುಟದಿಂದ)** ಪ್ರದೇಶಗಳಲ್ಲಿ ನೀರು ನುಗ್ಗಲಿದೆ. ಈ ಹಿಂದೆ 100 ವರ್ಷಗಳಿಗೊಮ್ಮೆ ನಡೆಯುತ್ತಿದ್ದ ಸಮುದ್ರ ಅವಘಡಗಳು, ಇನ್ನು ಮುಂದೆ ಪ್ರತಿ ವರ್ಷ ಸಂಭವಿಸಬಹುದು ಎಂದು ವರದಿಯಲ್ಲಿ ತಿಳಿಸಲಾಗಿದೆ.

ವರದಿಗೆ ಆನ್‌ಲೈನ್ ಸಮಾವೇಶದ ಮೂಲಕ 195 ಸದಸ್ಯ ದೇಶಗಳು ಒಪ್ಪಿಗೆ ನೀಡಿವೆ. ಮುಂದಿನ ದಿನಗಳಲ್ಲಿ ಎಲ್ಲಾ ವಲಯಗಳಲ್ಲಿ ಆಗಲಿರುವ ಬದಲಾವಣೆಯ ಮೇಲೆ ವರದಿ ಬೆಳಕು ಚೆಲ್ಲಿದೆ.

ಜಾಗತಿಕ ತಾಪಮಾನ 1.5 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗುವುದರಿಂದ ಬಿಸಿ ಅಲೆ, ದೀರ್ಘ ಕಾಲದ ಬಿಸಿ ವಾತಾವರಣ, ತಾಪಮಾನದ ಅತಿರೇಕಗಳು ಹೆಚ್ಚಾಗಲಿವೆ.ಇದು ಕೃಷಿ ಹಾಗೂ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎಂದು ತಿಳಿಸಲಾಗಿದೆ.

ಪರಿಸರ ಬದಲಾವಣೆ ಮಳೆಯಲ್ಲೂ ಬದಲಾವಣೆ ತರುತ್ತದೆ. ಎತ್ತರ ಪ್ರದೇಶಗಳಲ್ಲಿ ಮಳೆ ಹೆಚ್ಚಾಗುತ್ತದೆ. ಬೇರೆ ಪ್ರದೇಶಗಳಲ್ಲಿ ಮಳೆಯ ಪ್ರಮಾಣ ಇಳಿಕೆಯಾಗುತ್ತದೆ. ಮುಂಗಾರು ವೈವಿಧ್ಯತೆ ಪ್ರದೇಶದಿಂದ ಪ್ರದೇಶಕ್ಕೆ ಬೇರೆಯಾಗುತ್ತದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಆದರೂ ಸಹ, ತಾಪಮಾನ ಏರಿಕೆ 1.5 ಡಿಗ್ರಿ ಸೆಲ್ಸಿಯಸ್‌ಗೆ ಸೀಮಿತವಾಗಿರಲಿದೆ. ಪರಿಸರ ಬದಲಾವಣೆಯ ವೇಗ ಮುಂದಿನ ದಿನಗಳಲ್ಲಿ ಕ್ರಮವಾಗಿ ಇಳಿಕೆಯಾಗುತ್ತಾ ಸಾಗಿ, ನಂತರದಲ್ಲಿ ನಿಲ್ಲಲಿದೆ ಎಂದು ವರದಿಯಲ್ಲಿ ಆಶಾಭಾವನೆ ನೀಡಲಾಗಿದೆ.

## 70 ವರ್ಷ ಕಟ್ಟಿದ ದೇಶವನ್ನು 7 ವರ್ಷದಲ್ಲಿ ಹಾಳು ಮಾಡಿದ ಬಿಜೆಪಿ



ದಾವಣಗೆ, ಆ.10 - ಸ್ವಾತಂತ್ರ್ಯ ಹೋರಾಟದ ಸುವರ್ಣ ಅಧ್ಯಾಯಗಳಲ್ಲಿ ಒಂದಾದ ಕ್ವಿಟ್ ಇಂಡಿಯಾ ದಿನವನ್ನು ಪ್ರತಿವರ್ಷ ಆಗಸ್ಟ್ 9ರಂದು ಆಚರಿಸುವ ಮೂಲಕ ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನ ಮಾಡಿದ ಮಹಾ ನಾಯಕರುಗಳನ್ನು ಸ್ಮರಿಸುತ್ತಾ ಬಂದಿರುವ ಕಾಂಗ್ರೆಸ್ ಪಕ್ಷವು ಇಂದು ಕ್ವಿಟ್ ಇಂಡಿಯಾ ಚಳುವಳಿ ದಿನಾಚರಣೆಯನ್ನು ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಆಚರಿಸಲಾಯಿತು.

ಕಾಂಗ್ರೆಸ್ ರಾಜ್ಯ ವಕ್ತಾರ ಡಿ.ಬಸವರಾಜ್ ಮಾತನಾಡಿ, ಬ್ರಿಟಿಷರನ್ನು ಭಾರತ ದೇಶವನ್ನು ಬಿಡಿಸಲು 1942ರ ಆಗಸ್ಟ್ 9ರಂದು ಮಹಾತ್ಮ ಗಾಂಧೀಜಿ ನೇತೃತ್ವದಲ್ಲಿ ಕ್ವಿಟ್ ಇಂಡಿಯಾ ಚಳುವಳಿಗೆ ಕರೆ ನೀಡಲಾಯಿತು. ಅದೇ ರೀತಿ ಕರ್ನಾಟಕದಲ್ಲಿ ಭ್ರಷ್ಟ ಬಿಜೆಪಿ ಸರ್ಕಾರವನ್ನು ಹೋಗಲಾಡಿಸಲು ಸಿದ್ದರಾಮಯ್ಯ ಅವರು ಆಗಸ್ಟ್ 9ರಂದೇ ಬಳ್ಳಾರಿಗೆ ಪಾದಯಾತ್ರೆ ನಡೆಸಿ ಬಿಜೆಪಿ ಸರ್ಕಾರವನ್ನು ಕಿತ್ತೊಗೆದರು.

ಇಂದು ಮತ್ತೆ ನಾವು ಅಂತಹ ಹೋರಾಟದ ಮೂಲಕ ದೇಶದಲ್ಲಿ ಮಾನವ ಸಂಬಂಧಗಳ ನಡುವೆ ವಿಷ ಬೀಜ ಬಿತ್ತುವ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಬೇಕು ಎಂದು ಕರೆ ನೀಡಿದರು.

ದಾವಣಗೆರೆ ಸಂಸದರು ಪೆಟ್ರೋಲ್-ಡೀಸೆಲ್ ಬೆಲೆಯೇರಿಕೆ ಕುರಿತು ಕೇಳಿದರೆ ನಾವೇ ಸ್ವಂತ ಪೆಟ್ರೋಲ್ ಹಾಕಿಸುತ್ತೇವೆ ಎಂಬ ಉಢಾಪೆಯ ಉತ್ತರ ನೀಡುತ್ತಿದ್ದು, ಉಚಿತ ಪೆಟ್ರೋಲ್ ಬಂಕ್‌ಗಳನ್ನು ತೆರೆದು ಜನತೆಗೆ ಉಚಿತವಾಗಿ ಪೆಟ್ರೋಲ್- ಡೀಸೆಲ್ ವಿತರಿಸಲಿ ಎಂದು ಅವರು ಆಗ್ರಹಿಸಿದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಮಾತನಾಡಿ, ದೇಶದಲ್ಲಿ ಕೇವಲ ಮೋದಿ ಸ್ಮರಣೆ ನಡೆಯುತ್ತಿದ್ದು, ಮೋದಿ ಸ್ಮರಿಸುವವರು ಪಕ್ಷ ಬಿಟ್ಟರೂ ಚಿಂತೆ ಇಲ್ಲ ಪಕ್ಷವನ್ನು ದೇಶವನ್ನು ಕಟ್ಟೋಣ ಎಂದು ರಾಹುಲ್‌ಗಾಂಧಿಯವರು ಹೇಳಿಕೆ ನೀಡಿದ್ದು, ಅದರಂತೆ ಪಕ್ಷದ ಕಾರ್ಯಕರ್ತರು ಕಂಕಣ ಬದ್ಧರಾಗಿ ಕಾರ್ಯನಿರ್ವಹಿಸೋಣ ಎಂದು ಕರೆ ನೀಡಿದರು.

ದಾವಣಗೆರೆ ಸಂಸದರು ತಮ್ಮ ಟ್ರಸ್ಟ್ ನಿಂದ 3 ಕಡೆ ಆಕ್ಸಿಜನ್ ಘಟಕಗಳನ್ನು ಆರಂಭಿಸಿದ್ದು, ಈ ಟ್ರಸ್ಟ್ ಗೆ ಬರುವ ಆದಾಯದ ಮೂಲಗಳ ಬಗ್ಗೆ ತನಿಖೆ ಆಗಲಿ ಎಂದು ಆಗ್ರಹಿಸಿದರು. ಜಿ.ಎಂ.ಸಿದ್ದೇಶ್ವರ ಅವರಿಂದಲೇ ದಾವಣಗೆರೆ ಜಿಲ್ಲೆಗೆ ಸಚಿವ ಸ್ಥಾನ ಕೈ ತಪ್ಪುತ್ತಿದೆ ಎಂದು ದೂರಿದರು.

ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್ ಮಾತನಾಡಿ, 70 ವರ್ಷಗಳ ಸಾಧನೆ ಏನು ಎಂಬುದನ್ನು ಕೇಳುತ್ತಾರೆ. ಸಾಧನೆ ಮಾಡಿದ್ದು ಕಾಂಗ್ರೆಸ್ ಪಕ್ಷವೇ ಹೊರತು ಬಿಜೆಪಿ ಅಲ್ಲ. ಬ್ರಿಟಿಷರನ್ನು ದೇಶದಿಂದ ಓಡಿಸಲು ಕ್ವಿಟ್ ಇಂಡಿಯಾ ಚಳುವಳಿ ನಡೆಸಿದಂತೆ ಭ್ರಷ್ಟ ಬಿಜೆಪಿ ಸರ್ಕಾರವನ್ನು ತೊಲಗಿಸಲು ಮತ್ತೆ ಬೀದಿಗಿಳಿದು ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಕಾಂಗ್ರೆಸ್ ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ್, ಪರಿಶಿಷ್ಟ ಜಾತಿ ಘಟಕದ ರಾಜ್ಯ ಕಾರ್ಯದರ್ಶಿ ಸೋಮ್ಲಾಪುರದ ಹನುಮಂತಪ್ಪ, ಯುವ ಕಾಂಗ್ರೆಸ್‌ನ ಮೈನುದ್ದೀನ್, ಮಹಿಳಾ ಕಾಂಗ್ರೆಸ್‌ನ ನಾಗರತ್ನಮ್ಮ ಮಾತನಾಡಿದರು.

> ಸಂಸದ ಜಿ.ಎಂ.ಸಿದ್ದೇಶ್ವರ ಅವರಿಂದಲೇ ದಾವಣಗೆರೆ ಜಿಲ್ಲೆಗೆ ಸಚಿವ ಸ್ಥಾನ ಕೈ ತಪ್ಪುತ್ತಿದೆ.
> - ದಿನೇಶ್ ಕೆ.ಶೆಟ್ಟಿ
> ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರುಗಳಾದ ಕೆ.ಚಮನ್ ಸಾಬ್, ಜಿ.ಎಸ್. ಮಂಜುನಾಥ್, ನಲ್ಕುಂದ ಹಾಲೇಶ್, ಕೆಪಿಸಿಸಿ ಸಾಮಾಜಿಕ ಜಾಲತಾಣದ ಹರೀಶ್ ಕೆ.ಎಲ್. ಬಸಾಪುರ, ಗೋವಿಂದ ಹಾಲೇಕಲ್ಲು, ಶ್ರೀಕಾಂತ್ ಬಗರೆ, ಯುವ ಕಾಂಗ್ರೆಸ್‌ನ ಸಾಗರ್ ಎಲ್‌ಎಂಹೆಚ್, ರಾಕೇಶ್ ಜಿ., ಅಲಿ ರೆಹಮತ್, ಕೊಡಪಾನ ದಾದಾಪೀರ್, ಹಾಲೇಶ್ ಬಸವನಾಳ್, ಅಲೆಕ್ಸಾಂಡರ್(ಜಾನ್) ಯುವರಾಜ್, ಸೇವಾದಳದ ಡೋಲಿ ಚಂದ್ರು, ಅಬ್ದುಲ್ ಜಬ್ಬಾರ್, ಮಹಿಳಾ ಘಟಕದ ದ್ರಾಕ್ಷಾಯಣಮ್ಮ, ರಹಜಾನ್ ದಾದಾಪೀರ್, ರಾಜೇಶ್ವರಿ ಉಮೇಶ್, ಕವಿತಾ ಚಂದ್ರಶೇಖರ್, ರಾಜೇಶ್ವರಿ, ಗೀತಾ ಚಂದ್ರಶೇಖರ್, ರಹಜಾನ್ ದಾದಾಪೀರ್, ಸಂಗೀತಾ, ರತ್ನ, ಸುವರ್ಣಮ್ಮ, ಅಂಬಿಕಾ, ಸುಭಾನ್ ಸಾಬ್, ನಾಗರಾಜ್ ಜಮ್ನಳ್ಳಿ ಮತ್ತಿತರರಿದ್ದರು.

## ಸ್ವಾತಂತ್ರ್ಯ ಚಳುವಳಿಯ ಆಶಯಗಳ ಈಡೇರಿಕೆಗೆ ಆಗ್ರಹ




ದಾವಣಗೆರೆ, ಆ.9- ಸ್ವಾತಂತ್ರ್ಯ ಚಳುವಳಿಯ ಆಶಯಗಳನ್ನು ಸ್ವಾತಂತ್ರ ಬಂದು ಸುಮಾರು 74 ವರ್ಷಗಳಾದರೂ ದೇಶದಲ್ಲಿರುವ ಕಾರ್ಮಿಕ-ರೈತ-ಕೃಷಿ ಕೂಲಿಕಾರರಿಗೆ ಜಾರಿಗೊಳಿಸದಿರುವು ದನ್ನು ಖಂಡಿಸಿ, ನಗರದಲ್ಲಿ ಇಂದು ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು ಒಂದಾಗಿ ಪ್ರತಿಭಟನೆ ನಡೆಸಿದರು.

ಐತಿಹಾಸಿಕ 'ಕ್ವಿಟ್ ಇಂಡಿಯಾ' ಚಳುವಳಿ ನೆನಪಿನಲ್ಲಿ ನಗರದ ತಾಲ್ಲೂಕು ಕಚೇರಿ ಮುಂದೆ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್, ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಈ ಸಂಘಟನೆಗಳ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ವಿವಿಧ ಬೇಡಿಕೆಗಳುಳ್ಳ ಮನವಿಯನ್ನು ತಹಸೀಲ್ದಾರ್ ಮೂಲಕ ಪ್ರಧಾನಿಗೆ ಸಲ್ಲಿಸಲಾಯಿತು.

ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ಸಂಹಿತೆಗಳು ಹಾಗೂ ಜನ ವಿರೋಧಿ ಕೃಷಿ ಕಾನೂನುಗಳು ಮತ್ತು ವಿದ್ಯುತ್ ತಿದ್ದುಪಡಿ ಮಸೂದೆಯನ್ನು ರದ್ದುಪಡಿಸಬೇಕು. ರೈತರ ಎಲ್ಲಾ ಬೆಳೆಗಳಿಗೂ ಖಾತರಿ ಖರೀದಿಯೊಂದಿಗೆ ಸಮಗ್ರ ಉತ್ಪಾದನಾ ವೆಚ್ಚ ಮತ್ತು ಶೇ. 50ರಷ್ಟು ಪ್ರಕಾರ ನಿಗದಿಪಡಿಸಿದ ಕನಿಷ್ಠ ಬೆಂಬಲ ಬೆಲೆಯನ್ನು ಖಾತರಿಯಾಗಿ ದೊರೆಯುವಂತೆ ಕಾಯ್ದೆ ಮಾಡಬೇಕು ಮತ್ತು ಋಣಮುಕ್ತ ಕಾಯ್ದೆಯನ್ನು ಅಂಗೀಕರಿಸಿ ಜಾರಿಗೊಳಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

> **ಕಾರ್ಮಿಕ-ರೈತ-ಕೃಷಿ ಕೂಲಿಕಾರರ ಪ್ರತಿಭಟನೆ**

ಮಹಾತ್ಮಾ ಗಾಂಧಿ ಉದ್ಯೋಗ ಖಾತ್ರಿ ಯೋಜನೆಗೆ ಬಡ್ಜೆಟ್ ಅನುದಾನವನ್ನು ಹೆಚ್ಚಿಸಿ, ದಿನಕ್ಕೆ 600 ರೂ. ನಂತೆ ಕನಿಷ್ಠ 200 ದಿನಗಳ ಕೆಲಸ ಖಾತರಿಪಡಿಸಬೇಕು. ನಗರ ಉದ್ಯೋಗ ಖಾತರಿ ಕಾಯ್ದೆಯನ್ನು ಅಂಗೀಕರಿಸಬೇಕು. ನರೇಗಾದಲ್ಲಿ ಜಾತಿ ಆಧಾರಿತ ಕೆಲಸ ಹಾಗೂ ಕೂಲಿ ಪಾವತಿಯ ತಾರತಮ್ಯದ ಸಲಹಾ ಪ್ರಸ್ತಾಪವನ್ನು ವಾಪಸ್ಸು ಪಡೆಯಬೇಕು. ನೂತನ ಶಿಕ್ಷಣ ನೀತಿಯನ್ನು ರದ್ದುಪಡಿಸಿ ಎಲ್.ಕೆ.ಜಿ ಮತ್ತು ಯುಕೆಜಿ ಶಾಲೆಗಳನ್ನು ಅಂಗನವಾಡಿಯಲ್ಲೇ ಪ್ರಾರಂಭಿಸುವುದು ಸೇರಿದಂತೆ, ಇನ್ನಿತರೆ ಬೇಡಿಕೆಗಳ ಈಡೇರಿಕೆಗೆ ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾ ಸಂಚಾಲಕ ಕೆ.ಹೆಚ್. ಆನಂದರಾಜು, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕ ಇ. ಶ್ರೀನಿವಾಸ್, ಕಟ್ಟಡ ಕಾರ್ಮಿಕರ ಸಂಘದ ಹೊನ್ನೂರು ತಿಮ್ಮಣ್ಣ, ಗ್ರಾಮ ಪಂಚಾಯತಿ ನೌಕರರ ಸಂಘದ ಉಮೇಶ್, ದೇವದಾಸಿ ವಿಮೋಚನಾ ಸಂಘದ ನೇರ್ಲಿಗಿ ಭಾಗ್ಯ, ಹಾಸ್ಟೆಲ್ ಹೊರಗುತ್ತಿಗೆ ನೌಕರರ ಸಂಘದ ಹಾಲೇಶನಾಯ್ಕ, ಹುಲಿಕಟ್ಟೆ ಹಾಲೇಶ್ ನಾಯ್ಕ ಸೇರಿದಂತೆ, ಇತರರು ಭಾಗವಹಿಸಿದ್ದರು.

## ಡಿಪ್ಲೋಮಾ ವಿದ್ಯಾರ್ಥಿಗಳಲ್ಲಿ ತಾರತಮ್ಯ ಮಾಡದಂತೆ ಆಗ್ರಹ

ದಾವಣಗೆರೆ, ಆ.9- ಎಸ್ಸೆಸ್ಸೆಲ್ಸಿ ಹಾಗೂ ಪಿಯು ವಿದ್ಯಾರ್ಥಿಗಳಿಗೆ ಪಾಲಿಸಿದ ನಿಯಮಗಳನ್ನೇ ಮೊದಲೆರಡು ವರ್ಷದ ಡಿಪ್ಲೋಮಾ ವಿದ್ಯಾರ್ಥಿಗಳಲ್ಲಿ ಪಾಲಿಸಬೇಕು, ಡಿಪ್ಲೋಮಾ ವಿದ್ಯಾರ್ಥಿಗಳೊಂದಿಗೆ ತಾರತಮ್ಯ ಮಾಡದಂತೆ ಒತ್ತಾಯಿಸಿ ನಗರದ ಜಯದೇವ ವೃತ್ತದಲ್ಲಿಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಓ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ಡಿಪ್ಲೋಮಾ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.



ಪದವಿ, ಸ್ನಾತಕೋತ್ತರ ತರಗತಿಗಳಲ್ಲಿ ಅಂತಿಮ ವರ್ಷ ಹೊರತುಪಡಿಸಿ ಮತ್ತಾರಿಗೂ ಬೆಸ ಸೆಮಿಸ್ಟರ್‌ನ ಪರೀಕ್ಷೆ ನಡೆಸಬಾರದೆಂದು ಸರ್ಕಾರ ಹಾಗೂ ಕಾಲೇಜು ಶಿಕ್ಷಣ ಇಲಾಖೆ ಆದೇಶ ಹೊರಡಿಸಿದ್ದರೂ, ಇನ್ನು ಹಲವು ವಿಶ್ವವಿದ್ಯಾನಿಲಯಗಳು ಈ ಕುರಿತು ಅಧಿಕೃತ ಸುತ್ತೋಲೆ ಹೊರಡಿಸಿಲ್ಲ. ಬದಲಾಗಿ ಕೆಲವು ವಿ.ವಿ.ಗಳು ಸರ್ಕಾರದ ಆದೇಶಕ್ಕೆ ವಿರುದ್ಧವಾಗಿ ಪರೀಕ್ಷೆ ನಡೆಸಲು ಮುಂದಾಗುತ್ತಿವೆ. ಈಗಾಗಲೇ ಮಾನಸಿಕವಾಗಿ ತೀವ್ರ ಒತ್ತಡದಲ್ಲಿರುವ ವಿದ್ಯಾರ್ಥಿ ಸಮುದಾಯದ ಮೇಲೆ ಇದು ಮತ್ತಷ್ಟು ಒತ್ತಡವನ್ನು ಉಂಟು ಮಾಡುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಇತ್ತೀಚಿಗಷ್ಟೆ ಮುಖ್ಯಮಂತ್ರಿಗಳು ಮೂರನೇ ಅಲೆ ಆತಂಕ ಹಾಗೂ ಮತ್ತಿತರೆ ಮುಖ್ಯ ಕಾರಣಗಳನ್ನು ನೀಡಿ ಹತ್ತನೇ ತರಗತಿ ಮತ್ತು ಪಿಯು ತರಗತಿಗಳ ಪುನರಾರಂಭವನ್ನು ಸದ್ಯದಲ್ಲಿ ಮಾಡುವುದಿಲ್ಲ ಎಂದು ತಿಳಿಸಿದರು.

ಆದರೆ, ಇದೇ ವಯೋಮಿತಿಗೆ ಸೇರಿರುವ ಮೊದಲೆರಡು ವರ್ಷದ ಡಿಪ್ಲೋಮಾ ವಿದ್ಯಾರ್ಥಿಗಳ ಭೌತಿಕ ತರಗತಿಗಳು ಆರಂಭವಾಗಿವೆ, ಅವರ ಪರೀಕ್ಷೆಗಳೂ ನಡೆಯುತ್ತಿವೆ. ಇದು ವಿದ್ಯಾರ್ಥಿಗಳ ನಡುವಣ ತಾರತಮ್ಯವನ್ನು ತೋರುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪದವಿ ಕಾಲೇಜು ಪ್ರವೇಶ ಪ್ರಕ್ರಿಯೆಯಲ್ಲಿ ತಾರತಮ್ಯ ಸಲ್ಲದು, ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಒಂದೇ ಸೆಮಿಸ್ಟರ್ ಪರೀಕ್ಷೆ

> **ಎಐಡಿಎಸ್‌ಓ ನೇತೃತ್ವದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ**

ನಡೆಸಬೇಕು. 2ನೇ, 4ನೇ ಸೆಮಿಸ್ಟರ್ ಪದವಿ, 2ನೇ ಸೆಮಿಸ್ಟರ್ ಸ್ನಾತಕೋತ್ತರ ಪರೀಕ್ಷೆಗಳನ್ನು ರದ್ದುಗೊಳಿಸಿರುವ ಸುತ್ತೋಲೆಯನ್ನು ಎಲ್ಲಾ ವಿಶ್ವವಿದ್ಯಾಲಯಗಳು ಈ ಕೂಡಲೇ ಹೊರಡಿಸಬೇಕು, ರದ್ದುಗೊಳಿಸಿರುವ ಪರೀಕ್ಷೆಗಳ ಪರೀಕ್ಷಾ ಶುಲ್ಕ ಪಡೆಯಬೇಡಿ. ವಿದ್ಯಾರ್ಥಿಗಳು/ಪೋಷಕರ ಮೇಲೆ ಶುಲ್ಕದ ಒತ್ತಡ ಹೇರಬೇಡಿ ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಎನ್. ಪೂಜಾ ಸೇರಿದಂತೆ, ಸಂಘಟನೆಯ ಪದಾಧಿಕಾರಿಗಳು, ವಿದ್ಯಾರ್ಥಿಗಳು ಇದ್ದರು.

## ಎಸ್ಸೆಸ್ಸೆಲ್ಸಿ : ಭರಮಸಾಗರದ ಬಿ.ಎ. ಅಂಜನಾಗೆ ಶೇ. 98



ಭರಮಸಾಗರ, ಆ.9- ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಚಿತ್ರದುರ್ಗ ತಾಲ್ಲೂಕಿನ ಭರಮಸಾಗರದ ಡಿ.ವಿ.ಎಸ್ ಪ್ರೌಢಶಾಲೆಯ ವಿದ್ಯಾರ್ಥಿನಿ ಕು. ಬಿ.ಎ.ಅಂಜನಾ ರಾವ್ 625ಕ್ಕೆ 611 ಅಂಕಗಳನ್ನು ಪಡೆಯುವುದರೊಂದಿಗೆ ಶೇ.98 ರಷ್ಟು ಫಲಿತಾಂಶ ಗಳಿಸಿದ್ದಾರೆ.

ಅಂಜನಾ, ಭರಮಸಾಗರದ 'ಜನತಾವಾಣಿ' ವರದಿಗಾರ ಬಿ.ಜೆ.ಅನಂತಪದ್ಮನಾಭರಾವ್ ಅವರ ಪುತ್ರಿ.

## ಮಾಗನೂರು ಬಸಪ್ಪ ಶಾಲೆಗೆ ಶೇ. 100


ದಾವಣಗೆರೆ, ಆ.9- ನಗರದ ಮಾಗನೂರು ಬಸಪ್ಪ ಪ್ರೌಢಶಾಲೆಗೆ ಶೇ. 100 ಫಲಿತಾಂಶ ಲಭಿಸಿದೆ. 2020-21 ನೇ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಒಟ್ಟು 66 ವಿದ್ಯಾರ್ಥಿಗಳಲ್ಲಿ ಎ+ 12, ಎ-18, ಬಿ-24, ಸಿ-12 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

## ಎಸ್ಸೆಸ್ಸೆಲ್ಸಿ : ತರಳಬಾಳು ಜಗದ್ಗುರು ಪದವಿ ಪೂರ್ವ ಕಾಲೇಜಿಗೆ ಶೇ. 100 ಫಲಿತಾಂಶ

ದಾವಣಗೆರೆ, ಆ.9- ಕಳೆದ ಜುಲೈ ಮಾಹೆಯಲ್ಲಿ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಗರದ ಶ್ರೀ ತರಳಬಾಳು ಜಗದ್ಗುರು ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗಕ್ಕೆ ಶೇ. 100 ರಷ್ಟು ಫಲಿತಾಂಶ ಲಭಿಸಿದೆ.



ಎಂ.ಎನ್.ಮೊನಿಷಾ 625ಕ್ಕೆ 625



ಜಿ.ಬಿ.ವಿಷ್ಣುತೀರ್ಥ 625ಕ್ಕೆ 623

ಶಾಲೆಯ ಕು. ಎಂ.ಎನ್. ಮೊನಿಷಾ ಪ್ರತಿಯೊಂದು ವಿಷಯಗಳಲ್ಲಿಯೂ 100ಕ್ಕೆ 100 ಅಂಕಗಳನ್ನು ಗಳಿಸುವುದರೊಂದಿಗೆ ಒಟ್ಟು 625ಕ್ಕೆ 625 ಅಂಕಗಳನ್ನು ಗಳಿಸಿ, ಶೇ.100 ರಷ್ಟು ಫಲಿತಾಂಶ ಪಡೆದಿರುತ್ತಾಳೆ. ಚಿ. ಜಿ.ಬಿ. ವಿಷ್ಣುತೀರ್ಥ 623 ಅಂಕಗಳನ್ನು ಪಡೆದು, ದ್ವಿತೀಯ ಸ್ಥಾನ ಪಡೆದಿದ್ದಾನೆ. ಶಾಲೆಗೆ ಅತ್ಯುತ್ತಮ ಫಲಿತಾಂಶ ತಂದುಕೊಟ್ಟ ವಿದ್ಯಾರ್ಥಿಗಳನ್ನು ಮತ್ತು ಶ್ರಮಿಸಿದ ಶಿಕ್ಷಕ ವೃಂದವನ್ನು ಶಾಲೆಯ ಆಡಳಿತ ಮಂಡಳಿ ಅಭಿನಂದಿಸಿದೆ.

ಪರೀಕ್ಷೆಗೆ ಹಾಜರಾಗಿದ್ದ ಎಲ್ಲಾ 158 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಭಾಷಾ ವಿಷ ಯಗಳಲ್ಲಿ ಮತ್ತು ಉಳಿದ ವಿಷಯಗಳಲ್ಲಿ 60 ವಿದ್ಯಾರ್ಥಿ ಗಳು 100ಕ್ಕೆ 100 ರಷ್ಟು ಅಂಕಗಳನ್ನು ಪಡೆದಿದ್ದಾರೆ.

## ಕಾಯಕ ವರ್ಗದವರ ಅಸ್ಮಿತೆ

**(3ನೇ ಪುಟದಿಂದ)** ಗುರುಪೀಠದ ಶ್ರೀ ಕೃಷ್ಣ ಯಾದವಾನಂದ ಸ್ವಾಮೀಜಿ ಮಾತನಾಡಿ, ಶಿವಯೋಗಿ ಸಿದ್ದರಾಮರನ್ನು ನೆನೆದರೆ ಮನ ಶುದ್ಧವಾಗುವುದು ಮತ್ತು ಬದುಕು ಸಾರ್ಥಕ ಎಂದರು.

ವಿರಕ್ತಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಮಾತನಾಡಿ, ಸಿದ್ದರಾಮೇಶ್ವರರು ಸಮಾಜದಲ್ಲಿರುವ ಜಾತೀಯತೆ, ಅಸಮಾನತೆ, ಮೌಢ್ಯತೆಗಳನ್ನು ಕಿತ್ತು ಹಾಕಿ ಸಮ ಸಮಾಜವನ್ನು ಕಟ್ಟಿದ ಮಹಾನ್ ಆದರ್ಶ ಚೇತನ. ನಾವು ನಮಗಾಗಿ ಜೀವನ ಮಾಡದೇ ಮತ್ತೊಬ್ಬರಿ ಗಾಗಿ ಬದುಕಬೇಕು. ಅವರ ಕಷ್ಟಗಳನ್ನು ನಿವಾರಿಸಬೇಕು ಆಗ ಬದುಕು ಸಾರ್ಥಕವೆಂದು ಸಾಧಿಸಿ ತೋರಿಸಿದ ಮಾನವತಾವಾದಿ ಸಿದ್ದರಾಮೇಶ್ವರರು ಎಂದು ಸ್ಮರಿಸಿದರು.

ಮೈಸೂರಿನ ಶ್ರೀ ಬಸವಲಿಂಗಮೂರ್ತಿ ಸ್ವಾಮೀಜಿ ಮಾತನಾಡಿ, ವಚನ ಸಾಹಿತ್ಯವನ್ನು ಸಂರಕ್ಷಣೆ ಮಾಡುವಲ್ಲಿ ಸಿದ್ದರಾಮೇಶ್ವರರ ಪಾತ್ರ ಬಹಳ ದೊಡ್ಡದು. ಕಲ್ಯಾಣ ಕ್ರಾಂತಿಯ ನಂತರ ಎಲ್ಲಾ ಶರಣರನ್ನು ರಕ್ಷಣೆ ಮಾಡುವ ಮೂಲಕ ಬಸವ ತತ್ವಗಳನ್ನು ಉಳಿಸಿದ ಕೀರ್ತಿ ಸಿದ್ದರಾಮೇಶ್ವರರಿಗೆ ಸಲ್ಲುತ್ತದೆ ಎಂದರು.

ರಥೋತ್ಸವದಲ್ಲಿ ಚಳ್ಳಕೆರೆಯ ಬಸವ ಕಿರಣ ಸ್ವಾಮೀಜಿ ಗೌರವ ಉಪಸ್ಥಿತರಿದ್ದರು. ಭೋವಿ ಸಮಾಜದ ರೇಷ್ಮೆ ನಿಗಮದ ಮಾಜಿ ಅಧ್ಯಕ್ಷ ಡಿ. ಬಸವರಾಜ್, ಮಾಯಕೊಂಡ ಬಿಜೆಪಿ ಮುಖಂಡ ಆನಂದಪ್ಪ, ಜಿಲ್ಲಾ ಕಾರ್ಯಾಧ್ಯಕ್ಷ ಜಯಣ್ಣ, ನಗರ ಪಾಲಿಕೆಯ ಮಾಜಿ ಸದಸ್ಯ ಶ್ರೀನಿವಾಸ್, ಹರಿಹರ ತಾಲ್ಲೂಕು ಅಧ್ಯಕ್ಷ ಬ್ಯಾಂಕ್ ರಾಮಣ್ಣ, ಜಗಳೂರು ಮುಖಂಡ ವಕೀಲ ಶ್ರೀನಿವಾಸ, ಜಿಲ್ಲಾ ಪಂಚಾಯತ್ ಸದಸ್ಯ ಚಟ್ನಹಳ್ಳಿ ರಾಜಣ್ಣ, ಇಂಜಿನಿಯರ್ ವೆಂಕಟೇಶ್, ಮುಖಂಡರಾದ ಚಂದ್ರಪ್ಪ, ಮೂರ್ತ್ಯಪ್ಪ, ಯುವ ಮುಖಂಡ ಶಶಿಕುಮಾರ್, ನಾಗರಾಜು, ಕರಾಟೆ ತಿಮ್ಮೇಶ, ಕ್ರಿಕೆಟ್ ತಿಮ್ಮೇಶ, ಚಿಕ್ಕಮ್ಮಣ್ಣಿ ಬಡಾವಣೆ ಶ್ರೀನಿವಾಸ್, ಪೂಜಾರ ಹನುಮಂತಪ್ಪ, ಶಾಮಸುಂದರ, ಶೇಖರಪ್ಪ, ಮಹೇಶ್, ರುದ್ರೇಶ್, ಮೌನೇಶ್ ಸೇರಿದಂತೆ ಇತರರು ಇದ್ದರು.

## ಪೂರ್ಣಿಮಾರಿಗೆ ಸಚಿವ ಸ್ಥಾನ ನೀಡದಿದ್ದರೆ ಯಾದವ ಸಮಾಜ ಬಿಜೆಪಿಯಿಂದ ದೂರ



ದಾವಣಗೆರೆ, ಆ.9 - ಹಿಂದುಳಿದ ವರ್ಗಗಳ ಶ್ರೇಯಾಭಿವೃದ್ದಿಗಾಗಿ ನಾಲ್ಕು ದಶಕಗಳಿಂದ ಸಮಾಜ ಸೇವೆ ಮಾಡುತ್ತಾ ಬಂದಿರುವ ಮಾಜಿ ಸಚಿವ ದಿ.ಎ.ಕೃಷ್ಣಪ್ಪ ಅವರ ಸುಪುತ್ರಿ ಶಾಸಕರಾದ ಪೂರ್ಣಿಮಾ ಶ್ರೀನಿವಾಸ್ ಅವರಿಗೆ ಸಚಿವ ಸ್ಥಾನ ನೀಡದಿದ್ದರೆ ರಾಜ್ಯಾದ್ಯಂತ ಇರುವ ಗೊಲ್ಲ ಸಮಾಜ ಬಿಜೆಪಿಯಿಂದ ದೂರ ಉವುಳಿಯಬೇಕಾದೀತು ಎಂದು ಚಿತ್ರದುರ್ಗ ಯಾದವ ಮಠದ ಪೀಠಾಧಿಪತಿಗಳಾದ ಶ್ರೀ ಕೃಷ್ಣ ಯಾದವಾನಂದ ಸ್ವಾಮೀಜಿ ಬಿಜೆಪಿ ವರಿಷ್ಠರಿಗೆ ಎಚ್ಚರಿಕೆ ನೀಡಿದ್ದಾರೆ.

ನಗರದಲ್ಲಿ ಇಂದು ನಡೆದ ಭೋವಿ ಸಮಾಜದ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ, ವಿರಕ್ತ ಮಠಕ್ಕೆ ಭೇಟಿ ನೀಡಿದ್ದ ಶ್ರೀಗಳು, ತಮ್ಮನ್ನು ಭೇಟಿ ಮಾಡಿದ ಪತ್ರಿಕಾ ಮಾಧ್ಯಮದವರೊಂದಿಗೆ ಮಾತನಾಡಿದರು.

ಇದೇ ಸಂದರ್ಭದಲ್ಲಿ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದೇಶ್ವರಾಮೇಶ್ವರ ಭೋವಿ ಸಮಾಜವನ್ನು ಬಿಜೆಪಿ ಸರ್ಕಾರ ಸಂಪೂರ್ಣವಾಗಿ

> **ಕೃಷ್ಣ ಯಾದವಾನಂದ ಶ್ರೀ ಎಚ್ಚರಿಕೆ**

ನಿರ್ಲಕ್ಷ್ಯ ಮಾಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಯಾದವ ಮಹಾಸಭಾದ ಜಿಲ್ಲಾಧ್ಯಕ್ಷ ಬಾಡದ ಆನಂದರಾಜ್ ಗುರುಗಳ ಜೊತೆ ಮಾತನಾಡಿ, ನಮ್ಮಂತಹ ಶೋಷಿತ ವರ್ಗಗಳಿಗೆ ಸಂವಿಧಾನಾತ್ಮಕವಾಗಿ ಸಿಗಬೇಕಾದಂತಹ ಅವಕಾಶಗಳಿಂದ ವಂಚಿಸಬೇಡಿ ನಮ್ಮ ಗೊಲ್ಲ ಸಮಾಜ ಮತ್ತು ಇತರೆ 108 ಅಲೆಮಾರಿ ಸಮುದಾಯಗಳಿಗೆ ಏಕೈಕ ಶಾಸಕರಾಗಿರುವ ಪೂರ್ಣಿಮಾ ಕೃಷ್ಣಪ್ಪ ರವರಿಗೆ ಇನ್ನುಳಿದ ಮೂರು ಸಚಿವ ಸ್ಥಾನಗಳಲ್ಲಿ ಒಂದನ್ನು ನೀಡಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡಬೇಕಾದೀತು ಎಂದು ನೋವು ಹಂಚಿಕೊಂಡರು.

## ಆಗಸ್ಟ್ 9ನ್ನು 'ಭಾರತ ಉಳಿಸಿ ದಿನ'ವನ್ನಾಗಿ ಪರಿಗಣಿಸಲು ಆಗ್ರಹ

ದಾವಣಗೆರೆ, ಆ.9- ಕ್ವಿಟ್ ಇಂಡಿಯಾ ಚಳುವಳಿಯ ಆಗಸ್ಟ್ 9ರ ದಿನವನ್ನು 'ಭಾರತ ಉಳಿಸಿ ದಿನವಾಗಿ' ಪರಿಗಣಿಸಲು ಆಗ್ರಹಿಸಿ ನಗರದಲ್ಲಿ ಇಂದು ಎಐಯುಟಿಯುಸಿ, ಆರ್.ಕೆ.ಎಸ್, ಎಐಡಿವೈಓ, ಎಐಎಂಎಸ್‌ಎಸ್ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಕೇಂದ್ರ ಕಾರ್ಮಿಕ ಸಂಘಟನೆಗಳು, ಸ್ವತಂತ್ರ ಫೆಡರೇಷನ್‌ಗಳು ಮತ್ತು ಸಂಘಗಳ ಜಂಟಿ ಸಮಿತಿಯ ಕರೆ ಮೇರೆಗೆ ನಗರದ ಜಯದೇವ ವೃತ್ತದಲ್ಲಿ ಸಂಘಟನೆಗಳ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಕಾರ್ಮಿಕ-ವಿರೋಧಿ ಕಾರ್ಮಿಕ ಸಂಹಿತೆಗಳು, ರೈತ-ವಿರೋಧಿ ಕೃಷಿ ಕಾಯ್ದೆಗಳು ಮತ್ತು ವಿದ್ಯುಚ್ಛಕ್ತಿ ತಿದ್ದುಪಡಿ ಕಾಯ್ದೆಯನ್ನು ರದ್ದುಗೊಳಿಸಬೇಕು. ಉದ್ಯೋಗ ನಾಶ ಮತ್ತು ಜೀವನಾಂಶದ ಬಿಕ್ಕಟ್ಟನ್ನು ಬಗೆಹರಿಸಿ, ಹೆಚ್ಚೆಚ್ಚು ಉದ್ಯೋಗಗಳನ್ನು ಸೃಷ್ಟಿಸಿ, ಲಾಕ್‌ಡೌನ್ ಅಥವಾ ಅಂತಹ ಯಾವುದೇ ಸಂದರ್ಭದಲ್ಲಿ ಕೈಗಾರಿಕೆ, ಸೇವಾ ವಲಯ, ಕಾರ್ಖಾನೆಗಳ ನೌಕರರನ್ನು ಕೆಲಸದಿಂದ ವಜಾಗೊಳಿಸುವಿಕೆ ಮತ್ತು ವೇತನ ಕಡಿತವನ್ನು ನಿಷೇಧಿಸಬೇಕು. ಸರ್ಕಾರಿ ಇಲಾಖೆಗಳಲ್ಲಿ ಮಂಜೂರಾಗಿರುವ ಖಾಲಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಿ, ಪ್ರತಿ ವರ್ಷ ಶೇ. 3ರಷ್ಟು ಖಾಲಿ ಹುದ್ದೆಗಳ ಬಿಟ್ಟು ಕೊಡುವಿಕೆಯನ್ನು ನಿಲ್ಲಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಎಐಯುಟಿಯುಸಿ ಜಿಲ್ಲಾಧ್ಯಕ್ಷ ಮಂಜುನಾಥ್ ಕೈದಾಳೆ, ಜಿಲ್ಲಾ ಕಾರ್ಯದರ್ಶಿ ಮಂಜುನಾಥ್ ಕುಕ್ಕುವಾಡ , ಆರ್ ಕೆಎಸ್ ರಾಜ್ಯಾಧ್ಯಕ್ಷ ಸುನೀತ್ ಕುಮಾರ್, ಎಐಎಂಎಸ್ ಎಸ್ ಜಿಲ್ಲಾ ಕಾರ್ಯದರ್ಶಿ ಭಾರತಿ, ಮಧು ತೊಗಲೇರಿ, ತಿಪ್ಪೇಸ್ವಾಮಿ ಅಣಬೇರು, ಶಿವಾಜಿರಾವ್ ಢಗೆ, ನಾಗಜ್ಯೋತಿ, ರವಿ ಕುಮಾರ್, ತುಕಾರಾಮ್ ಸೇರಿದಂತೆ, ಇನ್ನಿತರರು ಪಾಲ್ಗೊಂಡಿದ್ದರು.

## ಎಂ.ಎಂ. ಶಿಕ್ಷಣ ಮಹಾವಿದ್ಯಾಲಯಕ್ಕೆ ಶೇ. 100 ಫಲಿತಾಂಶ

ದಾವಣಗೆರೆ, ಆ.9- ದಾವಣಗೆರೆ ವಿಶ್ವವಿದ್ಯಾಲಯದಿಂದ ಜುಲೈ ತಿಂಗಳಲ್ಲಿ ನಡೆದ 2018-19ನೇ ಸಾಲಿನ ಬಿ.ಇಡಿ, ನಾಲ್ಕನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯಕ್ಕೆ ಶೇ. 100 ರಷ್ಟು ಫಲಿತಾಂಶ ಬಂದಿದೆ.

ಸದರಿ ಸೆಮಿಸ್ಟರ್‌ನಲ್ಲಿ 92 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು ಎಲ್ಲರೂ ಉತ್ತಮ ಅಂಕಗಳನ್ನು ಗಳಿಸಿರುತ್ತಾರೆ. ಕು. ಅಪೂರ್ವ 2099, ಕು. ವಿದ್ಯಾಶ್ರೀ 2098, ಕು. ಮಿಸ್ಬಾ ತಸ್ನೀಮ್ 2093, ಕು. ಪವಿತ್ರ ಬೆನ್ನೂರು 2091, ಕು. ಮಾನಸ ಹೆಚ್.ಜೆ. 2083, ಸುಮಾ ಬಿ.ವಿ. 2081 ಅಂಕಗಳನ್ನು ಗಳಿಸಿ ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.




**ಜನ್ಮದಿನದ ಶುಭಾಶಯಗಳು**

ಇಂದು (ದಿ. 10.08.2021) ತಮ್ಮ ಜನ್ಮ ದಿನವನ್ನು ಸೇವಾ ಕಾರ್ಯಗಳೊಡನೆ ಆಚರಿಸಿಕೊಳ್ಳುತ್ತಿರುವ ದೈವಭಕ್ತ, ಸ್ನೇಹಜೀವಿ, ಸಂಘಟನಾ ಚತುರ, ಸೇವಾ ನಿರತ

**ಲ|| ವಾಸುದೇವ ರಾಯ್ಕರ್**

ಅವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು.

ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷರು, ಜಿಲ್ಲಾ ಯೋಗ ಒಕ್ಕೂಟ, ಸಿನಿಮಾ ಸಿರಿ, ಕರ್ನಾಟಕ ರಕ್ಷಣಾ ವೇದಿಕೆ, ಆರ್ಟ್ ಆಫ್ ಲಿವಿಂಗ್, ದೈವಜ್ಞ ಕ್ರೆಡಿಟ್ ಕೋ-ಆಪ್. ಸೊಸೈಟಿ ಹೀಗೆ 40ಕ್ಕೂ ಹೆಚ್ಚು ಸಂಘ-ಸಂಸ್ಥೆಗಳಲ್ಲಿ ಕ್ರಿಯಾಶೀಲರಾಗಿರುವ ರಾಯ್ಕರ್ ಅವರಿಗೆ ಭಗವಂತನು ಆಯುರಾರೋಗ್ಯ, ಐಶ್ವರ್ಯ, ಸುಖ-ಶಾಂತಿ, ನೆಮ್ಮದಿ ನೀಡಲೆಂದು ಶುಭ ಹಾರೈಸುವ,

**ಯೋಗರತ್ನ ಎನ್. ಪರಶುರಾಮ್**


ಮಾಲೀಕರು, ದರ್ಶನ್ ಸೋಲಾರ್ & ಎಲೆಕ್ಟ್ರಿಕಲ್ಸ್
ಸಂಸ್ಥಾಪಕ ಕಾರ್ಯದರ್ಶಿಗಳು, SASS ಯೋಗ ಫೆಡರೇಷನ್,
BIET ಕಾಲೇಜ್ ರೋಡ್, ದಾವಣಗೆರೆ.


## ದೊಡ್ಡ ಸಮುದಾಯಗಳ ಓಲೈಕೆಗೆ ಸಣ್ಣ ಸಮುದಾಯಗಳ ಜೀವಂತ ಶವ

### ಭೋವಿ ಸಮುದಾಯಕ್ಕೆ ಸಚಿವ ಸ್ಥಾನ ನೀಡದ್ದಕ್ಕೆ ಇಮ್ಮಡಿ ಸಿದ್ದರಾಮೇಶ್ವರ ಶ್ರೀಗಳ ಅಸಮಾಧಾನ

ದಾವಣಗೆರೆ, ಆ.9- ಭೋವಿ ಸಮುದಾಯಕ್ಕೆಸಚಿವಸಂಪುಟದಲ್ಲಿಯಾವುದೇ ಪ್ರಾತಿನಿಧ್ಯ ಸಿಗದಿರುವುದಕ್ಕೆ ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಭೋವಿ ಗುರು ಪೀಠದ ಶ್ರೀ ಜಗದ್ಗುರು ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅಸಮಾಧಾನಗೊಂಡಿದ್ದಾರೆ.

ನಗರದ ವಿರಕ್ತಮಠದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಶ್ರೀಗಳು, ಬಿಜೆಪಿ ಸರ್ಕಾರದ ಸಚಿವ ಸಂಪುಟವು ಅನುಭವ ಮಂಟಪದ ರೀತಿ ಇರಬೇಕಿತ್ತು. ಎಲ್ಲ ಜಾತಿ, ಜನಾಂಗದವರಿಗೂ ಪ್ರಾತಿನಿಧ್ಯ ದೊರೆಯಬೇಕಿತ್ತು. ದೊಡ್ಡ ಸಮುದಾಯ ಗಳನ್ನು ಓಲೈಕೆ ಮಾಡುವ ಮೂಲಕ ಸಣ್ಣ ಸಮುದಾಯಗಳನ್ನು ಜೀವಂತ ಶವ ಮಾಡಿದ್ದಾರೆ. ಅದು ಆಗಬಾರದು ಎಂದು ತಿಳಿಸಿದರು.



ರಾಜ್ಯದ ಬಿಜೆಪಿ ಸರ್ಕಾರ ಕೂಡ ಸಮ್ಮಿಶ್ರ ಸರ್ಕಾರ ಇದ್ದಂತೆ. ಸಂಪುಟದಲ್ಲಿ ಸಾಮಾಜಿಕ ನಾಯವೆಲ್ಲಿದೆ. ಈ ಸರ್ಕಾರ ಸಮಾಜಕ್ಕೆ ಸಾಮಾ ಜಿಕ ನ್ಯಾಯ ಕೊಡಿಸೋಕೆ ಹೇಗೆ ಸಾಧ್ಯ. ಸಂಪುಟ ರಚನೆ ದೊಡ್ಡ ಸಮುದಾಯಗಳ ಓಲೈಕೆ ಕೆಲಸವಾಗಬಾರದು. ಇದು ಶಾಸಕರನ್ನು ಪಕ್ಷಾಂತರ ಮಾಡಿಕೊಂಡು ರಚನೆ ಮಾಡಿರುವ ಸರ್ಕಾರ. ಹೀಗಾಗಿ, ಬಿಜೆಪಿ ಮತ್ತು ಪಕ್ಷಾಂತರಿ ಶಾಸಕರು ಸೇರಿ ಸಮ್ಮಿಶ್ರ ಸರ್ಕಾರ ರಚನೆ ಮಾಡಿದ್ದಾರೆ ಎಂದು ವ್ಯಂಗ್ಯವಾಡಿದರು.

ರಾಷ್ಟ್ರೀಯ ಪಕ್ಷವಾಗಿದ್ದರಿಂದ ಮುಖ್ಯಮಂತ್ರಿಗಳ ವಿವೇಚನೆಯಿಂದಷ್ಟೆ ಏನು ನಡೆಯುವುದಿಲ್ಲ. ಮುಖ್ಯಮಂತ್ರಿ ಮತ್ತು ನಿಕಟ ಪೂರ್ವ ಮುಖ್ಯಮಂತ್ರಿಗಳು ಸಾಮಾಜಿಕ ನ್ಯಾಯದಡಿಯಲ್ಲಿ ಯೋಜನೆ ರೂಪಿಸಬೇಕು. ಎಲ್ಲರಿಗೂ ಸಾಮಾಜಿಕ ನ್ಯಾಯ ನೀಡಬೇಕು ಎಂದು ಶ್ರೀಗಳು ಆಗ್ರಹಿಸಿದರು.

## ಬೇತೂರು ಗ್ರಾ.ಪಂ. ಅಧ್ಯಕ್ಷರಾಗಿ ಸುಮಾ, ಉಪಾಧ್ಯಕ್ಷರಾಗಿ ಚೌಡಮ್ಮ



ದಾವಣಗೆರೆ, ಆ. 9- ಬೇತೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಬೇತೂರಿನ ಶ್ರೀಮತಿ ಕೆ.ಸಿ. ಸುಮಾ ಬಿ. ವಿರೂಪಾಕ್ಷಪ್ಪ ಮತ್ತು ಉಪಾಧ್ಯಕ್ಷರಾಗಿ ಬಿ. ಚಿತ್ತಾನಹಳ್ಳಿಯ ಶ್ರೀಮತಿ ಚೌಡಮ್ಮ ರೇವಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯಾಗಿದ್ದ ಜಿಲ್ಲಾ ಪಂಚಾಯತ್ ಸಹಾಯಕ ಯೋಜನಾಧಿಕಾರಿ ಹೆಚ್. ಬಸವರಾಜ್ ಘೋಷಿಸಿದ್ದಾರೆ.

## ಹೆಚ್.ಗೋಪಗೊಂಡನಹಳ್ಳಿ ಗ್ರಾ.ಪಂ. ಉಪಾಧ್ಯಕ್ಷೆಯಾಗಿ ಪ್ರಮೀಳಾ ರುದ್ರಯ್ಯ



ಹೊನ್ನಾಳಿ, ಆ.9 - ತಾಲ್ಲೂಕಿನ ಹೆಚ್. ಗೋಪಗೊಂಡನಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆಯಾಗಿ ಶ್ರೀಮತಿ ಪ್ರಮೀಳಾ ರುದ್ರಯ್ಯ ಅವಿರೋಧ ವಾಗಿ ಆಯ್ಕೆಯಾಗಿದ್ದಾರೆ. ಇಂದು ನಡೆದ ಚುನಾವಣೆಯಲ್ಲಿ ಈ ಆಯ್ಕೆ ನಡೆಯಿತು ಎಂದು ಚುನಾವಣಾಧಿಕಾರಿ ಆರ್.ಎಫ್. ಈಶ್ವರ ನಾಯ್ಕ ತಿಳಿಸಿದರು. ಪಂಚಾಯಿತಿ ಅಧ್ಯಕ್ಷರಾದ ಮಂಜುಳಾ, ಸದಸ್ಯರಾದ ಸಂದೀಪ್, ರಮೇಶ್, ಮಂಜುಳಾಬಾಯಿ, ಸುರೇಶ್ ನಾಯ್ಕ, ಆಶಾ, ಗುಡ್ಡಾಚಾರಿ, ಹಾಲಮ್ಮ, ಎಂ. ಬಸವರಾಜಪ್ಪ, ಪಿಡಿಓ ಹನುಮಂತ, ಕಾರ್ಯದರ್ಶಿ ಚಂದ್ರಪ್ಪ ಇದ್ದರು.

## ಕುಪ್ಪೇಲೂರು ಗ್ರಾಪಂ ಅಧ್ಯಕ್ಷರಾಗಿ ಶಿಲ್ಪಾ



ರಾಣೇಬೆನ್ನೂರು, ಆ.9- ತಾಲ್ಲೂಕಿನ ಕುಪ್ಪೇಲೂರು ಗ್ರಾಮ ಪಂಚಾಯ್ತಿಗೆ ಬಿಜೆಪಿ ಬೆಂಬಲಿತ ಶಿಲ್ಪಾ ಮರುಳಪ್ಪನವರ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ರೇಖಾ ಮಾದೇನಹಳ್ಳಿ ಆಯ್ಕೆಯಾಗಿದ್ದು, ಶಾಸಕ ಅರುಣಕುಮಾರ ಪೂಜಾರ ಹಾಗೂ ಸಾರಿಗೆ ನಿಗಮದ ನಿರ್ದೇಶಕ ಸಂತೋಷ ಪಾಟೀಲ ಅಭಿನಂದಿಸಿದರು.

## ದೇಶದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ 35 ಸಾವಿರ

ನವದೆಹಲಿ, ಆ. 9 - ದೇಶದಲ್ಲಿ ಸೋಮವಾರ 35,499 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಇದೇ ದಿನ 447 ಜನ ಸಾವನ್ನಪ್ಪಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಸಕ್ರಿಯ ಸೋಂಕಿತರ ಸಂಖ್ಯೆ 4,634ರಷ್ಟು ಇಳಿಕೆಯಾಗಿದ್ದು, 4.02 ಲಕ್ಷಕ್ಕೆ ತಲುಪಿದೆ. ಕೊರೊನಾ ಟೆಸ್ಟ್‌ಗಳಲ್ಲಿ ಪಾಸಿಟಿವ್ ಪ್ರಮಾಣ ಶೇ.2.59ರಷ್ಟಿದೆ. ದೇಶದಲ್ಲಿ ಇದುವರೆಗೂ 50.86 ಕೋಟಿ ಡೋಸ್ ಲಸಿಕೆ ನೀಡಲಾಗಿದೆ.






# ಜೆ.ಡಿ.ಎಸ್. ಪಕ್ಷ ತೊರೆಯಲು ಹೊದಿಗೆರೆ ರಮೇಶ್ ನಿರ್ಧಾರ



ಚನ್ನಗಿರಿ, ಆ.9- ಜೆಡಿಎಸ್ ಎಸ್ಸಿ ವಿಭಾಗದ ರಾಜ್ಯಾಧ್ಯಕ್ಷ ಹೊದಿಗೆರೆ ರಮೇಶ್ ಅವರು ಜೆಡಿಎಸ್ ತೊರೆಯಲು ನಿರ್ಧರಿಸಿದ್ದಾರೆ.

ಈ ಬಗ್ಗೆ ಚರ್ಚಿಸಲು ಬೆಂಕಿಕೆರೆ ಗ್ರಾಮದ ಬಳಿಯ ಹೊದಿಗೆರೆ ರಮೇಶ್ ಅವರ ತೋಟದ ಮನೆಯಲ್ಲಿ ಇಂದು ಕರೆದಿದ್ದ ಅವರ ಅಭಿಮಾನಿಗಳ ಸಭೆಯಲ್ಲಿ ರಾಜಕೀಯ ವಾಗಿ ಮುಂದಿನ ನಿರ್ಧಾರಗಳ ಬಗ್ಗೆ ಚರ್ಚಿಸಲಾಯಿತು.

ಸಭೆಯಲ್ಲಿ ಭಾಗವಹಿಸಿದ್ದ ಅನೇಕರು ಮಾತನಾಡಿ, ಕಳೆದ 3 ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ ಸೋತಿದ್ದೀರಿ. ತಮ್ಮ ತಾಲ್ಲೂಕಿನಲ್ಲಿ ಜೆಡಿಎಸ್ ಪಕ್ಷದ ಮುಖ ನೋಡಿ ಮತ ಹಾಕುವವರಿಲ್ಲ. ಇದುವರೆಗೂ ನಿಮ್ಮ ಮುಖ ನೋಡಿ ಜನ ಮತದಾನ ಮಾಡಿದ್ದಾರೆ. ನಾವು ಜೆಡಿಎಸ್ ಎಂಬ ಕಾರಣಕ್ಕಾಗಿ ಸರ್ಕಾರದಿಂದ ಯಾವ ಸೌಲಭ್ಯಗಳೂ ನಮಗೆ ಸಿಗದಂತೆ ಇಲ್ಲಿನ ಶಾಸಕರು ನೋಡಿಕೊಳ್ಳುತ್ತಾರೆ. ಆದ್ದರಿಂದ ನಿಮಗೆ ಮತ್ತು ನಮಗೆ ಶಕ್ತಿ ತುಂಬುವ ರಾಷ್ಟ್ರೀಯ ಪಕ್ಷವನ್ನು ಸೇರೋಣ ಎಂಬ ಅಭಿಪ್ರಾಯ ವ್ಯಕ್ತಪಡಿಸಿ, ಅಂತಿಮವಾಗಿ ನಿಮ್ಮ ನಿರ್ಧಾರಕ್ಕೆ ನಾವು ಬದ್ಧರಾಗಿರುತ್ತೇವೆಂಬ ಮಾತನ್ನು ರಮೇಶ್ ಅವರಿಗೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹೊದಿಗೆರೆ ರಮೇಶ್ ಅವರು, ಜೆಡಿಎಸ್ ಹಾಗೂ ದೇವೇಗೌಡ್ರು, ಕುಮಾರಸ್ವಾಮಿ, ರೇವಣ್ಣ ಸೇರಿದಂತೆ ಎಲ್ಲಾ ನಾಯಕರು ಇದುವರೆಗೂ ನನಗೆ ಗೌರವ ಕೊಟ್ಟು ನಡೆಸಿಕೊಂಡು ಬಂದಿದ್ದಾರೆ ಎಂದು ಕೃತಜ್ಞತೆ ಸಲ್ಲಿಸಿದರು.

ಜೆಡಿಎಸ್ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ನಾನು ಕೇಳಿದ ಕೆಲಸಗಳನ್ನು ಮಾಡಿಕೊಟ್ಟಿದ್ದಾರೆ. ಆದರೆ ಚನ್ನಗಿರಿ ತಾಲ್ಲೂಕಿನಲ್ಲಿ ಜೆಡಿಎಸ್‌ಗೆ ತನ್ನದೇ ಆದ ನೆಲೆ ಇಲ್ಲದ ಕಾರಣ ಇಲ್ಲಿ ನಾವು ಅಧಿಕಾರಕ್ಕೆ ಬರುವುದು ಅಸಾಧ್ಯ ಎಂಬ ತೀರ್ಮಾನಕ್ಕೆ ನೀವೆಲ್ಲರೂ ಬಂದಿರುವುದರಿಂದ ಜೆಡಿಎಸ್ ತೊರೆಯುವುದು ಅನಿವಾರ್ಯವಾಗಿದೆ

ನನ್ನನ್ನು ನಂಬಿದ ಜನರಿಗೆ ನ್ಯಾಯ ಕೊಡಿಸುವುದಕ್ಕಾಗಿ ನಾನು ರಾಷ್ಟ್ರೀಯ ಪಕ್ಷವನ್ನು ಸೇರುವುದು ಕೂಡಾ ಅನಿವಾರ್ಯವಾಗಿದೆ. ನಾನು ಮುಂಬರುವ ವಿಧಾನಸಭೆ ಚುನಾವಣೆಯ ದೃಷ್ಟಿಯಿಂದ ಅಥವಾ ನನಗೆ ಎಂಎಲ್‌ಎ ಟಿಕೆಟ್ ಸಿಗುತ್ತದೆಂಬ ಉದ್ದೇಶದಿಂದ ಬೇರೆ ಪಕ್ಷ ಸೇರುತ್ತಿಲ್ಲ. ನಾನು ಸೇರುವ ಪಕ್ಷದ ಮುಖಂಡರ ನಿರ್ದೇಶನದಂತೆ ನಡೆದುಕೊಳ್ಳುತ್ತೇನೆಂದು ಹೇಳಿದ ರಮೇಶ್ ಅವರು, ಪರೋಕ್ಷವಾಗಿ ಕಾಂಗ್ರೆಸ್ ಸೇರುವ ಸುಳಿವು ನೀಡಿದಾಗ ಸಭೆಯಲ್ಲಿದ್ದವರು ಚಪ್ಪಾಳೆ ತಟ್ಟಿ ಬೆಂಬಲ ವ್ಯಕ್ತಪಡಿಸಿದರು.

ನಿವೃತ್ತ ಪ್ರಾಧ್ಯಾಪಕ ಡಾ.ಎ.ಬಿ.ರಾಮಚಂದ್ರಪ್ಪ ಅವರು ಸಲಹೆ ನೀಡಿದರು. ಚನ್ನಗಿರಿ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಬಾಬು ಸೇರಿದಂತೆ ಮತ್ತಿತರರು ಸಭೆಯಲ್ಲಿದ್ದರು.

## ಹರಿಹರದಲ್ಲಿ ಇಂದು ಹೆಚ್. ಶಿವಪ್ಪ ಪುಣ್ಯಸ್ಮರಣೆ



ಮಾಜಿ ಸಚಿವ ದಿ. ಹೆಚ್. ಶಿವಪ್ಪ ಅವರ 8ನೇ ವರ್ಷದ ಪುಣ್ಯಸ್ಮರಣೆ ಹಾಗೂ ನಮನ-ನೆನಪು ಕಾರ್ಯಕ್ರಮವನ್ನು ಹೆಚ್. ಶಿವಪ್ಪ ಸಾಂಸ್ಕೃತಿಕ ಬಳಗದಿಂದ ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಅಧ್ಯಕ್ಷ ಬಿ.ಚಿದಾನಂದಪ್ಪ ತಿಳಿಸಿದ್ದಾರೆ.

ಹೆಚ್.ಕೆ.ವೀರಪ್ಪ ಕಲ್ಯಾಣ ಮಂಟಪದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಕಾರ್ಯಕ್ರಮವನ್ನು ಮಾಜಿ ಸಚಿವ ಬಸವರಾಜ್ ಎಸ್. ಹೊರಟ್ಟಿ ಉದ್ಘಾಟನೆ ಮಾಡುವರು. ಬೆಳಗಾವಿ ಜಿಲ್ಲೆಯ ಬೈಲೂರು ಮಠದ ಶ್ರೀ ನಿಜಗುಣಾನಂದ ಸ್ವಾಮೀಜಿ, ಕೂಡಲಸಂಗಮ ಪಂಚಮಸಾಲಿ ಪೀಠದ ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ಸೇರಿದಂತೆ ತಾಲ್ಲೂಕಿನಲ್ಲಿರುವ ವಿವಿಧ ಮಠಾಧೀಶರು ಸಾನ್ನಿಧ್ಯ ವಹಿಸುವರು. ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅಧ್ಯಕ್ಷತೆ ವಹಿಸುವರು.

## ಪಿಎಂ-ಕಿಸಾನ್ : 19,500 ಕೋಟಿ ರೂ. ಕಂತು ಬಿಡುಗಡೆ

ನವದೆಹಲಿ, ಆ. 9 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪಿಎಂ - ಕಿಸಾನ್ ಯೋಜನೆಯಡಿ 9.75 ಕೋಟಿ ರೈತರಿಗೆ 19,500 ಕೋಟಿ ರೂ.ಗಳನ್ನು ನೀಡಿದ್ದಾರೆ. ಪಿಎಂ - ಕಿಸಾನ್ ಯೋಜನೆಯಡಿ ಮೂರು ಕಂತುಗಳಲ್ಲಿ ವರ್ಷಕ್ಕೆ 6,000 ರೂ.ಗಳನ್ನು ನೀಡಲಾಗುತ್ತದೆ. ಸೋಮವಾರ ಕಂತು ನೀಡಿದ ನಂತರ ಮಾತನಾಡಿರುವ ಪ್ರಧಾನಿ ಮೋದಿ, ಸರ್ಕಾರ ಇದುವರೆಗೂ ರೈತರ ಕುಟುಂಬಗಳಿಗೆ 1.57 ಲಕ್ಷ ಕೋಟಿ ರೂ. ನೀಡಿದೆ ಎಂದು ಹೇಳಿದ್ದಾರೆ. ಕೊರೊನಾ ಸಮಯದಲ್ಲಿ 1 ಲಕ್ಷ ಕೋಟಿ ರೂ.ಗಳನ್ನು ಸಣ್ಣ ರೈತರಿಗೆ ನೀಡಲಾಗಿದೆ. ಇದು ಮುಂಗಾರು ಬಿತ್ತನೆಗೆ ನೆರವಾಗಲಿದೆ ಎಂದು ಮೋದಿ ತಿಳಿಸಿದ್ದಾರೆ.


## ಅರ್ಧ ಹೆಲ್ಮೆಟ್‌ಗೆ ದಂಡ ವಿಧಿಸದಂತೆ ಮನವಿ




ದಾವಣಗೆರೆ, ಆ.9- ಕೊರೊನಾ ಸಂಕಷ್ಟ ಕಾಲದಲ್ಲಿ ಫುಲ್ ಹೆಲ್ಮೆಟ್ ಖರೀದಿಸುವುದು ಕಷ್ಟ. ಅದಕ್ಕಾಗಿ ಇನ್ನೂ ಆರು ತಿಂಗಳ ಕಾಲ ಫುಲ್ ಹೆಲ್ಮೆಟ್ ನಿಯಮ ಕಡ್ಡಾಯ ಮಾಡಬಾರದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಅವರಿಗೆ ಕಾಂಗ್ರೆಸ್ ಮನವಿ ಮಾಡಿದೆ.

ಐಎಸ್‌ಐ ಮಾರ್ಕ್ ಇರುವ ಹೆಲ್ಮೆಟ್ ಕಡ್ಡಾಯ ಕೂಡಲೇ ಮಾಡಬಾರದು. ಅಲ್ಲದೇ ಆಟೋದಲ್ಲಿ ಮೀಟರ್ ಅಳವಡಿಸಲು ಕೂಡ ಆರು ತಿಂಗಳು ಸಮಯಾವಕಾಶ ನೀಡಬೇಕು ಎಂದು ಮನವಿಯಲ್ಲಿ ವಿನಂತಿಸಲಾಗಿದೆ.

ಅರ್ಧ ಹೆಲ್ಮೆಟ್‌ಗೆ ಸದ್ಯ ದಂಡ ವಿಧಿಸುವುದಿಲ್ಲ. ಆದರೆ, ಅರ್ಧ ಹೆಲ್ಮೆಟ್ ಮಾರಾಟವನ್ನು ನಿರ್ಬಂಧಿಸಲಾಗುವುದು ಎಂದು ಎಸ್‌ಪಿ ಭರವಸೆ ನೀಡಿದರು. ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್, ಸದಸ್ಯರಾದ ಗಡಿಗುಡಾಳು ಮಂಜುನಾಥ್, ಕೆ. ಚಮನ್‌ಸಾಬ್ ಅವರುಗಳು ಈ ಸಂದರ್ಭದಲ್ಲಿ ಇದ್ದರು.










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte